# ಕರ್ನಾಟಕ ಯಕ್ಷಗಾನ ಅಕಾಡೆಮಿ, ಬೆಂಗಳೂರು

www.karnatakayakshaganaacademy.com

ಪ್ರಾಯೋಜಕತ್ವದಲ್ಲಿ ಪ್ರಕಾಶಿತ

ಯಕ್ಷಗಾನ ಪ್ರಸಂಗ

# ಕಂಜಾಕ್ಷಿ ಕಲ್ಯಾಣ

ಕವಿ

## ಕೀರಿಕ್ಕಾಡು ಮಾಸ್ತರ್ ವಿಷ್ಣು ಭಟ್ಟ

ಅಂತರಜಾಲ ಆವೃತ್ತಿ, ಸಹ-ಪ್ರಕಾಶಕರು ಮತ್ತು ಪ್ರಕಾಶನ ನಿರ್ವಾಹಕರು

ಯಕ್ಷವಾಹಿನಿ®

Email: yakshaprasangakosha@gmail.com

Blog: www.yakshaprasangakosha.yakshavahini.com

ಆವೃತ್ತಿ ೧.೦ ನವೆಂಬರ್ ೧೫, ೨೦೨೦

ಯಕ್ಷವಾಹಿನಿ

Email: yakshaprasangakosha@gmail.com, yakshavahini@gmail.com, Blog: www.yakshaprasangakosha.yakshavahini.com


## ಯಕ್ಷವಾಹಿನಿಯ ಯಕ್ಷಪ್ರಸಂಗಕೋಶ ಯೋಜನಾ ಸಮೂಹ

**ಗೌರವಾನ್ವಿತ ಸಂಪಾದಕ ಮಂಡಳಿ:**

ಶ್ರೀಧರ ಡಿ. ಎಸ್. (ಗೌರವಾಧ್ಯಕ್ಷರು), ಗಿಂಡೀಮನೆ ಮೃತ್ಯುಂಜಯ, ಡಾ. ಆನಂದರಾಮ ಉಪಾಧ್ಯ, ದಿನೇಶ ಉಪ್ಪೂರ, ಅಶೋಕ ಮುಂಗಳಿಮನೆ

**ಗೌರವಾನ್ವಿತ ಸಲಹಾ ಮಂಡಳಿ:**

ಅನಂತ ಪದ್ಮನಾಭ ಫಾಟಕ್, ಡಾ. ಪ್ರದೀಪ ಸಾಮಗ, ವಿದುಷಿ ಸುಮಂಗಲಾ ರತ್ನಾಕರ್, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅವಿನಾಶ್ ಬೈಪಾಡಿತ್ತಾಯ, ಮಹೇಶ್ ಪದ್ಯಾಣ, ನಾರಾಯಣ ಹೆಬ್ಬಾರ್

**ಕಾರ್ಯಕಾರಿ ಮಂಡಳಿ:**

ರವಿ ಮಡೋಡಿ (ಯೋಜನಾಧ್ಯಕ್ಷ), ಅಶ್ವಿನಿ ಹೊದಲ (ಯೋಜನಾ ಕಾರ್ಯದರ್ಶಿ), ವಿಂಧ್ಯಾಶ್ರೀ ಸೋಮಯಾಜಿ (ಯೋಜನಾ ಸಹಕಾರ್ಯದರ್ಶಿ), ನಟರಾಜ ಉಪಾಧ್ಯ, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ. ನಾ. ಭಟ್, ಅಜಿತ್ ಕಾರಂತ್, ಇಟಗಿ ಮಹಾಬಲೇಶ್ವರ ಭಟ್, ಪಟ್ಟಾಜೆ ವಸಂತಕೃಷ್ಣ, ಡಾ. ಶ್ರೀಕೃಷ್ಣ ಭಟ್ ಸುಣ್ಣಂಗುಳಿ, ವಿದ್ಯಾಹೆಗಡೆ ಕವಿತಾಸ್ಫೂರ್ತಿ, ಶಿವಕುಮಾರ ಬಿ. ಅಳಗೋಡು

**ಗೌರವಾನ್ವಿತ ಸ್ವಯಂಸೇವಕರು:**

ಗಣಪತಿ ಭಟ್ ಪಿ., ವಸುಮತಿ ಜಿ., ಅನಿತಾ ಎಂ. ಜಿ. ರಾವ್, ರಂಜನ ಭಟ್, ಶಶಿಕಲಾ ಮೂರ್ತಿ, ರಘುರಾಜ್ ಶರ್ಮ, ಚಂದ್ರ ಆಚಾರ್, ಸುಬ್ರಹ್ಮಣ್ಯ ಭಾಗವತ್, ಉಮೇಶ್ ಶಿರೂರು, ವೆಂಕಟೇಶ್ ಹೆಗಡೆ, ವೆಂಕಟೇಶ್ ವೈದ್ಯ, ಕೆ. ಗೋವಿಂದ ಭಟ್ ಬೆಂಗಳೂರು, ಸತೀಶ್ ಯಲ್ಲಾಪುರ, ಮಯೂರಿ ಉಪಾಧ್ಯಾಯ, ಶ್ರೀಕಾಂತ್ ನಾಯಕ್, ರವಿ ಕಾಮತ್ ಕುಮಟಾ, ರಾಮಕೃಷ್ಣ ಮರಾಠಿ

**ಸಹಕಾರ:**

**ಪ್ರಸಂಗ ಕವಿಗಳು:**

ಬಲಿಪ ನಾರಾಯಣ ಭಾಗವತ, ಹೊಸ್ತೋಟ ಮಂಜುನಾಥ ಭಾಗವತ, ಪ್ರೊ. ಎಂ. ಎ. ಹೆಗಡೆ, ಡಾ. ಅಮೃತ ಸೋಮೇಶ್ವರ, ಶ್ರೀಧರ ಡಿ. ಎಸ್., ಎಂ. ಆರ್. ಲಕ್ಷ್ಮೀನಾರಾಯಣ, ಮಧುಕುಮಾರ್ ಬೋಳೂರು, ಅಗರಿ ಭಾಸ್ಕರ ರಾವ್, ಅಂಬರೀಷ ಭಾರದ್ವಾಜ, ಶಿವಕುಮಾರ ಬಿ. ಅಳಗೋಡು, ದಿನೇಶ ಉಪ್ಪೂರ, ಗಿಂಡೀಮನೆ ಮೃತ್ಯುಂಜಯ, ಇಟಗಿ ಮಹಾಬಲೇಶ್ವರ ಭಟ್, ವಿಶ್ವವಿನೋದ ಬನಾರಿ, ಮಧೂರು ವೆಂಕಟಕೃಷ್ಣ, ಡಾ. ಪಟ್ಟಾಜೆ ಗಣೇಶ ಭಟ್

**ಕವಿಚರಿತ್ರೆ ಮತ್ತು ಪ್ರಸಂಗಯಾದಿ:**

ಡಾ. ಕಬ್ಬಿನಾಲೆ ವಸಂತ ಭಾರದ್ವಾಜ, ಡಾ. ಪಾದೇಕಲ್ಲು ವಿಷ್ಣು ಭಟ್

**ಸಂಸ್ಥೆಗಳು:**

ಕರ್ನಾಟಕ ಯಕ್ಷಗಾನ ಅಕಾಡೆಮಿ & ಕನ್ನಡ ಮತ್ತು ಸಂಸ್ಕೃತಿ ಇಲಾಖೆ (ಕರ್ನಾಟಕ ಸರ್ಕಾರ), ಯಕ್ಷಗಾನ ಕಲಾರಂಗ ಉಡುಪಿ, ಯಕ್ಷಸಿಂಚನ ಬೆಂಗಳೂರು

**ಪ್ರಸಂಗ ಪುಸ್ತಕ ಒದಗಣೆ ಮತ್ತಿತರ:**

ಡಾ. ರಾಧಾಕೃಷ್ಣ ಉರಾಳ್, ಅಗರಿ ಭಾಸ್ಕರ ರಾವ್, ಗೋಪಾಲಕೃಷ್ಣ ಭಾಗವತ್, ಶ್ರೀಪಾದಗದ್ದೆ, ಮುರಳಿ ಶ್ರೇಣಿ, ಅನಂತ ದಂತಳಿಕೆ, ಗುರುನಂದನ್ ಹೊಸೂರು, ನಾರಾಯಣ ಶಾನುಭಾಗ, ನಾರಾಯಣ ಯಾಜಿ, ಶೇಷಗಿರಿಯಪ್ಪ, ಎಸ್. ಎಂ. ಹಗಡೆ, ದಿವಾಕರ ಹೆಗಡೆ, ನಿತ್ಯಾನಂದ ಹೆಗಡೆ ಮೂರೂರು, ಶ್ರೀನಿಧಿ ಡಿ. ಎಸ್., ರವೀಂದ್ರ ಐತುಮನೆ, ಗುರುರಾಜ ಹೊಳ್ಳ ಬಾಯಾರು, ಸುರೇಶ್ ಹೆಗಡೆ ಬೆಳಸಲಿಗೆ, ಮನೋಹರ ಕುಂದರ್, ನಂದಳಿಕೆ ಬಾಲಚಂದ್ರ ರಾವ್, ರಘುರಾಮ್ ಮುಳಿಯ, ಸುಧಾ ಕಿರಣ್ ಅಧಿಕ ಶ್ರೇಣಿ, ಮಹಾಬಲಮೂರ್ತಿ ಕೊಡ್ಲೆಕೆರೆ, ಎ. ಎನ್. ಹೆಗಡೆ, ಮುರಳೀಧರ ಉಪಾಧ್ಯ

## ಯಕ್ಷವಾಹಿನಿ ಸಂಸ್ಥೆ

**ಗೌರವಾನ್ವಿತ ಸಲಹಾ ಮಂಡಳಿ:**

ಮಲ್ಪೆ ಲಕ್ಷ್ಮೀನಾರಾಯಣ ಸಾಮಗ (ಗೌರವಾಧ್ಯಕ್ಷರು), ಶ್ರೀಧರ ಡಿ. ಎಸ್., ಗಿಂಡೀಮನೆ ಮೃತ್ಯುಂಜಯ, ದಿನೇಶ ಉಪ್ಪೂರ, ಡಾ. ಪ್ರದೀಪ ಸಾಮಗ, ರಾಜಗೋಪಾಲ ಕನ್ಯಾನ, ಶಶಿರಾಜ ಸೋಮಯಾಜಿ, ಅನಂತ ಪದ್ಮನಾಭ ಫಾಟಕ್, ವಿದುಷಿ ಸುಮಂಗಲಾ ರತ್ನಾಕರ್, ಹರಿಕೃಷ್ಣ ಹೊಳ್ಳ, ಕಜೆ ಸುಬ್ರಹ್ಮಣ್ಯ ಭಟ್, ಲ. ನಾ. ಭಟ್, ರಾಘವೇಂದ್ರ ಮಯ್ಯ (ಲೆಕ್ಕ ಪರಿಶೋಧಕರು)

**ವಿಶ್ವಸ್ಥ ಮಂಡಳಿ ಮತ್ತು ಕಾರ್ಯಕಾರಿ ಮಂಡಳಿ:**

ಡಾ. ಆನಂದರಾಮ ಉಪಾಧ್ಯ (ಅಧ್ಯಕ್ಷ), ನಟರಾಜ ಉಪಾಧ್ಯ (ಕಾರ್ಯದರ್ಶಿ), ರವಿ ಮಡೋಡಿ (ಖಜಾಂಚಿ)

**ಆರ್ಥಿಕ ಸಹಾಯ:**

ಅಶೋಕ್ ಶೆಟ್ಟಿ ವಿ. ಕೊಡ್ಲಾಡಿ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

**ಪುಸ್ತಕ ಸಹಾಯ:**

ವಿದುಷಿ ಸುಮಂಗಲಾ ರತ್ನಾಕರ್, ಮಂಟಪ ಪ್ರಭಾಕರ ಉಪಾಧ್ಯ, ಡಾ. ಆನಂದರಾಮ ಉಪಾಧ್ಯ, ಗಿಂಡೀಮನೆ ಮೃತ್ಯುಂಜಯ, ನಟರಾಜ ಉಪಾಧ್ಯ

## ಮೊದಲ ಮಾತು

ಯಕ್ಷಗಾನ ಪ್ರದರ್ಶನಗಳಿಗೆ ಆಧಾರವಾಗಿರುವುದು ಪ್ರಸಂಗಸಾಹಿತ್ಯಅದರ .ಅದು ಯಕ್ಷಗಾನದ ಏಕಮಾತ್ರ ಲಿಖಿತಸಾಹಿತ್ಯವೂ ಹೌದು . .ಈಗ ಅಂದಾಜಿಸಿದಂತೆ ಇಂಥ ಪ್ರಸಂಗಕೃತಿಗಳ ಸಂಖ್ಯೆ ಐದು ಸಾವಿರಕ್ಕೂ ಮಿಕ್ಕಿದೆ .ಅಭಾವದಲ್ಲಿ ಯಕ್ಷಗಾನದ ಅಡಿಪಾಯವೇ ಇಲ್ಲವಾಗುತ್ತದೆ ವರ್ಷವರ್ಷವೂ ನೂರಾರು ಹೊಸಕೃತಿಗಳಸೇರ್ಪಡೆಯಾಗುತ್ತಲೇ ಇವೆ .ಆದರೆ ವಿಷಾದದ ಸಂಗತಿಯೆಂದರೆ ಸೂಕ್ತವಾದ ವಿತರಣಾ ವ್ಯವಸ್ಥೆಯಿಲ್ಲ . ಮುದ್ರಿತವಾದ ಕೃತಿಗಳ ಮಾರಾಟ ಮತ್ತಷ್ಟು .ಅನೇಕ ಪ್ರಾಚೀನ ಅರ್ವಾಚೀನ ಕೃತಿಗಳಿಗೆ ಮುದ್ರಣ ಭಾಗ್ಯವಿಲ್ಲ .ಬೇಕೆಂಬುವರಿಗೆ ಪ್ರಸಂಗಗಳು ಲಭಿಸುತ್ತಿಲ್ಲ ಹೀಗಾಗಿ ಈಗಾಗಲೇ ಅನೇಕ ಕೃತಿಗಳು ನಾಶವಾಗಿವೆ .ತೊಡಕಿನದು; ಮತ್ತಷ್ಟು ನಾಶವಾಗುತ್ತಿವೆ.

ಯಕ್ಷಗಾನ ಪ್ರಸಂಗಗಳು ಕನ್ನಡಸಾಹಿತ್ಯದ ಶ್ರೀಮಂತಿಕೆಯ ದ್ಯೋತಕಗಳುಕನ್ನಡದಲ್ಲಿ ಬೆಳೆದು ಬಂದ ಛಂದೋ ವೈವಿಧ್ಯದ ಸಾರವನ್ನೆಲ್ಲ . ಅದರ ಸಿದ್ಧಿ ಸಾಧನೆಗಳನ್ನು ಕುರಿತು ಗಂಭೀರವಾದ .ಹೀರಿಕೊಂಡು ಸುಪುಷ್ಟವಾಗಿ ಬೆಳೆದು ನಿಂತ ಈ ಸಾಹಿತ್ಯ ಪ್ರಕಾರವು ಕನ್ನಡಕ್ಕೊಂದು ಹೆಮ್ಮೆ ಆದರ .ಅಧ್ಯಯನದ ಆವಶ್ಯಕತೆಯಿದೆ಼ ಪ್ರಸಂಗಳ ಅಲಭ್ಯತೆ ಅಧ್ಯಯನಕ್ಕೆ ತೊಡಕಾಗಿದೆಅಧ್ಯಯನಕ್ಕೆ ತೊಡಗುವವರಿಗೆ ಕೃತಿಗಳನ್ನು . .ಇದರಿಂದ ಯಕ್ಷಗಾನಕ್ಕೆ ತನ್ಮೂಲಕ ಕನ್ನಡ ಸಾಹಿತ್ಯಕ್ಕೆ ಹಾನಿಯಾಗುತ್ತಿದೆ .ಸಂಗ್ರಹಿಸುವುದೊಂದು ದೊಡ್ಡ ಸವಾಲಾಗಿದೆ

ಇದನ್ನು ಮನಗಂಡ ಯಕ್ಷಗಾನ ಅಕಾಡೆಮಿಯು ಮಹತ್ವಾಕಾಂಕ್ಷೆಯ ಯೋಜನೆಯೊಂದನ್ನು ಕೈಗೊಂಡಿದೆಅದೇ ಯಕ್ಷಗಾನ ಪ್ರ .ಸಂಗಗಳ ಡಿಜಿಟಲೀಕರಣಎಲ್ಲ ಪ್ರಸಂಗಗಳನ್ನು ಡಿಜಿಟಲೀಕರಣಕ್ಕೊಳಪಡಿಸಿ ಅಕಾಡೆಮಿಯ ವೆಬ್ಸೈಟಿನ ಮೂಲಕ ಆಸಕ್ತರಿಗೆ ಉಚಿತವಾಗಿ ತಲುಪಿಸುವ ವ್ಯವಸ್ಥೆ . ಪ್ರಪಂಚದ ಯಾವುದೇ ಮೂಲೆಯಲ್ಲಿದ್ದರೂ ಬೇಕಾದ ಕೃತಿಯನ್ನು ಪಡೆದುಕೊಳ್ಳಲು ಯಕ್ಷಗಾನ ಪ್ರಸಂಗವನ್ನು ತೆಗೆದುಕೊಂಡು ಯಕ್ಷಗಾನ .ಇದು ಅಧ್ಯಯನಕ್ .ಮಾಡುವವರಿಗೆ ಅತ್ಯಂತ ಅನುಕೂಲಕೂ, ಸಂಗ್ರಹಕ್ಕೂ ಅನುಕೂಲ ಹಾಗೂ ಯಕ್ಷಗಾನ ಪ್ರಿಯರಿಗೆ ಆಪ್ತವಾದೀತೆಂದು ಭಾವಿಸಿದ್ದೇವೆ .

ಇದನ್ನು ಕಾರ್ಯಗತಗೊಳಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನೆರವು ದೊಡ್ಡದುಈ ಕಾರ್ಯಕ್ಕೆ ಯಕ್ಷವಾಹಿನಿ ಸಂಸ್ಥೆಯು . ಇದಕ್ಕೆ .ಕೈಜೋಡಿಸಿರುವುದು ಹಾಗೂ ಪುಸ್ತಕರೂಪದಲ್ಲಿ ಯಕ್ಷಗಾನ ಪ್ರಸಂಗವನ್ನು ಸಿದ್ಧಗೊಳಿಸಿಕೊಡುತ್ತಿದೆ ಅಕಾಡೆಮಿಯ ಸರ್ವಸದಸ್ಯರ ಸಹಮತವಿದೆ . ಈ ಯೋಜನೆಯನ್ನು ಕೃತಿರೂಪಕ್ಕೆ ತರಲು ಸಹಕರಿಸಿದವರೆಲ್ಲರನ್ನೂ, ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರನ್ನೂ, ಸರ್ಕಾರವನ್ನೂ ಹೃತ್ಪೂರ್ವಕವಾಗಿ ನೆನೆಯುತ್ತೇವೆ.



ಪ್ರೊ. ಎಂ. ಎ. ಹೆಗಡೆ
ಅಧ್ಯಕ್ಷರು
ಕರ್ನಾಟಕ ಯಕ್ಷಗಾನ ಅಕಾಡೆಮಿ



ಎಸ್. ಎಚ್. ಶಿವರುದ್ರಪ್ಪ
ರಿಜಿಸ್ಟ್ರಾರ್
ಕರ್ನಾಟಕ ಯಕ್ಷಗಾನ ಅಕಾಡೆಮಿ

## ಯಕ್ಷಪ್ರಸಂಗಕೋಶ ಯೋಜನೆ

ಕನ್ನಡ ಕಾವ್ಯದ ಚರಿತ್ರೆಯಲ್ಲಿ ಬಹುದೊಡ್ಡ ಸ್ಥಾನ ಪಡೆಯಬೇಕಾದ ಕೃತಿಗಳು ಅವಜ್ಞೆಗೊಳಗಾದುದನ್ನು ಗಮನಿಸಿ ಯಕ್ಷವಾಹಿನಿ ಸಂಸ್ಥೆಯಿಂದ ಯಕ್ಷಪ್ರಸಂಗಕೋಶದ ನಿರ್ಮಾಣವಾಗುತ್ತಿದೆ. ಯಕ್ಷಗಾನ ಪ್ರಸಂಗಗಳು ಪ್ರಯೋಗದ ಆಧಾರ ಪಠ್ಯಗಳು. ವ್ಯಾಖ್ಯಾನದ ಅಗತ್ಯವೂ ಇರುವುದರಿಂದ ಪ್ರಸಂಗಕವಿಗಳು ಬರೆದ ಗೀತೆಗಳು ಗುಣಮಟ್ಟದಲ್ಲೂ ಮೇಲಾಗಿದ್ದು ವಿದ್ವಾಂಸರಿಂದ ಮರಳಿ ಮರಳಿ ವ್ಯಾಖ್ಯಾನಕ್ಕೆ ಒಳಗಾಗಿವೆ. ಇಂತಹ ಪಠ್ಯಗಳನ್ನು ಖಿಲವಾಗದಂತೆ ಶಾಶ್ವತವಾಗಿ ಕಾಪಿಡುವುದೂ, ಜಾಗತಿಕ ಮಟ್ಟದಲ್ಲಿ ಲಭ್ಯವಾಗುವಂತೆ ಮಾಡುವುದೂ ನಮ್ಮ ಯಕ್ಷಪ್ರಸಂಗಕೋಶದ ಉದ್ದೇಶ. ಅದಕ್ಕೆ ಇಂದು ಅಂತರಜಾಲವೇ ಸೂಕ್ತ ಮಾಧ್ಯಮವಾಗಿದೆ. ಅಂತರಜಾಲದ ಮೂಲಕ ಪ್ರಕಟವಾದ ಪ್ರಸಂಗವೂ, ಅದನ್ನು ಸಿದ್ಧಪಡಿಸಿದ ಸಂಸ್ಥೆಯೂ ಇಡೀ ವಿಶ್ವದ ಮುಂದೆ ನಿಂತಿರುತ್ತದೆ ಎಂಬ ಅರಿವನ್ನುಇಟ್ಟುಕೊಂಡೇ ಪ್ರಸಂಗಗಳನ್ನು ಸಿದ್ಧಪಡಿಸಿದ್ದೇವೆ.

ಪ್ರಸಂಗಗಳ ಪ್ರಸ್ತುತ ರೂಪದಲ್ಲಿ ಇರುವ ಮುದ್ರಣ ದೋಷಗಳು, ವ್ಯಾಕರಣ ದೋಷಗಳು, ಗ್ರಾಮ್ಯಶಬ್ದಗಳ ಬಳಕೆಯಿಂದಾದ ಶೈಥಿಲ್ಯ, ಶಬ್ದಗಳನ್ನು ಬಿಡಿಸಬೇಕಾಗಿದ್ದಲ್ಲಿ ಕೂಡಿಸಿ, ಕೂಡಿಸಬೇಕಾಗಿದ್ದಲ್ಲಿ ಬಿಡಿಸಿ ಉಂಟಾದ ದೋಷಗಳು, ಮಟ್ಟುಗಳ ಹೆಸರುಗಳಲ್ಲಿ ಕಣ್ತಪ್ಪಿನಿಂದ ನುಸುಳಿದ ದೋಷಗಳು, ಆಟ ಆಡಿಸುವಾಗ ಅನುಕೂಲಕ್ಕೆ ತಕ್ಕಂತೆ ಭಾಗವತರು ಸೇರಿಸಿಕೊಂಡ ಅನ್ಯ ಪ್ರಸಂಗಗಳ ಪದಗಳು ಮುದ್ರಿತರೂಪದಲ್ಲಿ ಸೇರಿಹೋಗಿರುವುದು, ಮುದ್ರಣವಾಗುವಾಗ ಕೆಲವು ಪದಗಳು ಬಿಟ್ಟುಹೋಗಿರುವುದು ಇವುಗಳೆಲ್ಲ ಕವಿಯು ಶ್ರಮವಹಿಸಿ ರಚಿಸಿದ ಸುಂದರ ರಚನೆಯಲ್ಲಿ ಅರ್ಥಾಂತರವನ್ನೋ, ಅಪಾರ್ಥವನ್ನೋ ಉಂಟುಮಾಡುವ ಸಾಧ್ಯತೆಯಿದೆ. ಈಗ ಪ್ರಕಟಿಸುತ್ತಿರುವ ಪ್ರಸಂಗಗಳನ್ನು ಸಾಧ್ಯವಾದ ಮಟ್ಟಿಗೆ ಈ ದೋಷಗಳಿಂದ ಮುಕ್ತಗೊಳಿಸಿದ್ದೇವೆ ಎಂಬ ಭರವಸೆ ನಮಗಿದೆ. ಒಟ್ಟಿನಲ್ಲಿ ನಮ್ಮ 'ಪ್ರಸಂಗಕೋಶ'ದಿಂದ ಪಡೆದುಕೊಂಡ ಪ್ರಸಂಗವು ಶುದ್ಧವಾಗಿರಬೇಕೆಂಬುದೇ ನಮ್ಮ ಅಪೇಕ್ಷೆ.



**ಶ್ರೀಧರ ಡಿ. ಎಸ್.**
ಪ್ರಧಾನ ಸಂಪಾದಕರು



**ಗಿಂಡೀಮನೆ ಮೃತ್ಯುಂಜಯ**
ಸಹ ಸಂಪಾದಕರು



**ರವಿ ಮಡೋಡಿ**
ಯೋಜನಾಧ್ಯಕ್ಷರು

## ಯಕ್ಷವಾಹಿನಿ

ಯಕ್ಷಗಾನವು ಕನ್ನಡ ಸಂಸ್ಕೃತಿಯ ಕಿರೀಟದಲ್ಲಿ ರಾರಾಜಿಸುತ್ತಿರುವ ದೊಡ್ಡ ನವಿಲುಗರಿಯು. ಅಖಂಡ ಕರ್ನಾಟಕದ ಯಕ್ಷಗಾನ ಪರಂಪರೆಯ ಹಿರಿಮೆ ಗರಿಮೆಗಳನ್ನು ಹೆಚ್ಚಿಸುವತ್ತ ಅಂತರಜಾಲದ ಸಾಧ್ಯತೆಗಳನ್ನು ಸದುಪಯೋಗಪಡಿಸಿಕೊಳ್ಳುವುದೇ ಯಕ್ಷವಾಹಿನಿ ಸಂಸ್ಥೆಯ ಮುಖ್ಯ ಕಾಣ್ಕೆಯಾಗಿದೆ. ಯಕ್ಷಪ್ರಸಂಗಯಾದಿ ಮತ್ತು ಯಕ್ಷಪ್ರಸಂಗಕೋಶ ಇವೆರೆಡು ನಾವು ಈಗಾಗಲೇ ತೊಡಗಿಸಿಕೊಂಡಿರುವ ಪ್ರಾಥಮಿಕ ಯೋಜನೆಗಳು. ಈ ಯೋಜನೆಗಳಿಗೆ ಬೆನ್ನೆಲುಬಾಗಿ ನಮ್ಮೊಂದಿಗಿರುವ ಎಲ್ಲಾ ವಿದ್ವಾಂಸರು, ಪ್ರಸಂಗಕವಿಗಳು, ಸ್ವಯಂಸೇವಕರು, ಪ್ರಾಯೋಜಕರು ಹಾಗೂ ಎಲ್ಲಾ ರೀತಿಯ ಬೆಂಬಲ ಮತ್ತು ಸಹಾಯ ನೀಡುತ್ತಿರುವ ವಿಶ್ವವ್ಯಾಪಿ ಯಕ್ಷಪ್ರೇಮಿಗಳಿಗೆ ವಿನಮ್ರ ಧನ್ಯವಾದಗಳು. ಪ್ರಾಯೋಜಕತ್ವ ಹೆಚ್ಚಿದಂತೆ ನಮ್ಮ ಇನ್ನೂ ಅನೇಕ ಕನಸುಗಳು ಯೋಜನೆಗಳಾಗಿ ಅನಾವರಣಗೊಳ್ಳಲಿವೆ. ನಿಮ್ಮ ಹೆಚ್ಚುತ್ತಿರುವ ಸಹಕಾರ, ಸಹಾಯ, ಬೆಂಬಲ ಮತ್ತು ಆಶೀರ್ವಾದಕ್ಕೆ ನಾವು ಚಿರಋಣಿಗಳು.

**ಪ್ರೊ. ಮಲ್ಪೆ ಲಕ್ಷ್ಮೀನಾರಾಯಣ ಸಾಮಗ, ಗೌರವಾಧ್ಯಕ್ಷರು**

**ಡಾ. ಆನಂದರಾಮ ಉಪಾಧ್ಯ, ಕಾರ್ಯಾಧ್ಯಕ್ಷ ಮತ್ತು ವಿಶ್ವಸ್ಥ**

**ನಟರಾಜ ಉಪಾಧ್ಯ, ಕಾರ್ಯದರ್ಶಿ ಮತ್ತು ವಿಶ್ವಸ್ಥ**

**ರವಿ ಮಡೋಡಿ, ಖಜಾಂಚಿ ಮತ್ತು ವಿಶ್ವಸ್ಥ**

# ಸಾರಾಂಶ

**ಪ್ರಸಂಗ ವಿಧ:**
ಪೌರಾಣಿಕ

**ಆಧಾರ ಗ್ರಂಥ:**
ಶ್ರೀಕೃಷ್ಣ ಬೋಧಾಮೃತ

**ಭಾಷೆ:**
ಕನ್ನಡ

**ಹಿಂದಿನ ಪ್ರಕಾಶನಗಳ ವಿವರ:**
ಶ್ರೀಗೋಪಾಲಕೃಷ್ಣ ಪ್ರಕಾಶನ, ದೇಲಂಪಾಡಿ - ೧೯೬೩

**ಹಕ್ಕುಸ್ವಾಮ್ಯ ವಿವರ:**
ಈ ಅಂತರಜಾಲ ಆವೃತ್ತಿಯು ವಿಶ್ವದಾದ್ಯಂತ ಉಚಿತವಾಗಿ ಹಂಚಲ್ಪಡುವುದೇ ಜಂಟಿ ಪ್ರಕಾಶಕರ ಘನ ಉದ್ದೇಶವು. ಈ ಆವೃತ್ತಿಯನ್ನು ಹೇಗಿದೆಯೋ ಹಾಗೆಯೇ ಸಮಗ್ರವಾಗಿ ಮುದ್ರಿಸಲು ಯಾ ಅಂತರಜಾಲದ ಮೂಲಕ ಉಚಿತವಾಗಿ ಹಂಚಲು ಯಾವುದೇ ಅಭ್ಯಂತರ ಇಲ್ಲ. ಮೂಲ ಪ್ರಕಾಶನಗಳ ಹಕ್ಕುಸ್ವಾಮ್ಯ ಹೇಗಿದೆಯೋ ಹಾಗೆಯೇ ಉಳಿದಿರುತ್ತದೆ.

**ಒಟ್ಟು ಪದ್ಯಗಳು:**
೩೦೦

**ಪಾತ್ರಗಳು:**
ಹಂಸಪಾದ (ಮಾಳವದೇಶದ ರಾಜ), ರಾಜಹಂಸ (ಹಂಸಪಾದನ ಮಗ - ಕಥಾನಾಯಕ), ದೀರ್ಘಸಾಧು (ಯತಿ), ವಾಲ್ಮೀಕಿ ಮಹರ್ಷಿ, ದೀರ್ಘಾಕ್ಷ (ವಿಂಧ್ಯಾಪುರದ ಅಸುರರಾಜ), ನಾರದ ಮುನಿ, ಕಾರ್ತಿಕೇಯ (ಗಾಂಧಾರದೇಶದ ರಾಜ), ಕಂಜಾಕ್ಷ (ಕಾರ್ತಿಕೇಯನ ಮಗ), ಕಂಜಾಕ್ಷಿ (ಕಾರ್ತಿಕೇಯನ ಮಗಳು), ಚಾರಕ, ರಂಭೆ, ಊರ್ವಶಿ, ಭೇತಾಳ ರಾಜ, ಭೂತಗಳು, ಭೂತರಕ್ಕಸರು, ದೇವೇಂದ್ರ, ಸೂರ್ಯಕಾಂತೆ (ದೇವೇಂದ್ರನ ಮಗಳು), ದೇವತೆಗಳು, ಅಗ್ನಿ, ವಾಯು, ಪರಮೇಶ್ವರ, ವೀರಭದ್ರ, ಕಾಲಭೈರವ, ಬ್ರಹ್ಮ

**ಕಥಾಸಾರಾಂಶ:**

ಮಾಳವದ ರಾಜ ಹಂಸಪಾದ ಓಲಗಸ್ಥನಾದಾಗ ದೀರ್ಘಸಾಧುವಿನ ಆಗಮನವಾಗುತ್ತದೆ. ಅರಸನ ಹಿರಿಯ ಪುತ್ರ ರಾಜಹಂಸನಿಗೆ ಚಂದ್ರಾಯುಧ ಪ್ರದಾನ ಮಾಡಿ, ಮೂರು ವರ್ಷ ಭೂಸಂಚಾರ ಮಾಡಲು ತಿಳಿಸುವನು. ಅಂತೆಯೇ ಹೊರಟ ರಾಜಹಂಸನು ಎರಡು ವತ್ಸರ ಸಂಚರಿಸಿ, ಬಳಿಕ ವಾಲ್ಮೀಕಿ ಮಹರ್ಷಿಗಳಲ್ಲಿ ವೇದಾಂತ ಹಾಗೂ ಯೋಗಶಾಸ್ತ್ರ ಅಭ್ಯಾಸಮಾಡುತ್ತಿರುವನು.

ವಿಂಧ್ಯಾಪಟ್ಟಣದಲ್ಲಿ ದೀರ್ಘಾಕ್ಷನೆಂಬ ರಾಕ್ಷಸನಿರಲು, ನಾರದರು ಅಲ್ಲಿಗೆ ಹೋಗಿ, ಗಾಂಧಾರದ ಅಧಿಪತಿ ಕಾರ್ತಿಕೇಯನ ಕುಮಾರಿ ಕಂಜಾಕ್ಷಿಯ ರೂಪು-ಲಾವಣ್ಯ ವರ್ಣಿಸಿ, ಅವಳನ್ನು ವರಿಸಲು ಪ್ರೇರೇಪಿಸುವುದು. ಗಾಂಧಾರಕ್ಕೆ ತೆರಳಿದ ಅಸುರ, ರಾಜನನ್ನೂ, ರಾಜಪುತ್ರ ಕಂಜಾಕ್ಷನನ್ನೂ ಸೋಲಿಸಿ ಸೆರೆಯಲ್ಲಿಡುವುದು. ವಾಲ್ಮೀಕಿಯಾಶ್ರಮ ಸೇರಿದ ನಾರದ ಈ ವೃತ್ತಾಂತ ತಿಳಿಸಿ, ರಾಜಹಂಸನು ಗಾಂಧಾರಕ್ಕೆ ಹೋಗುವಂತೆ ಮಾಡುವರು. ಅಲ್ಲಿಗೈತಂದ ರಾಜಹಂಸ, ಚಂದ್ರಾಯುಧದಿಂದ ರಕ್ಕಸನನ್ನು ಮರ್ದಿಸಿ, ಅರಸನನ್ನು ಬಿಡುಗಡೆಗೊಳಿಸುವುದು. ಸಂತುಷ್ಟನಾದ ರಾಜ ತನ್ನ ಮಗಳಾದ ಕಂಜಾಕ್ಷಿಯನ್ನು ರಾಜಹಂಸನಿಗೆ ಧಾರೆಯೆರೆದು ಕೊಡುವುದು.

ಕಂಜಾಕ್ಷನು ಮಾಳಿಗೆಯಲ್ಲಿ ವೀಣಾವಾದನ ಮಾಡುತ್ತಿದ್ದಾಗ, ಗಗನದಲ್ಲಿ ಸಂಚರಿಸುತ್ತಿದ್ದ ರಂಭೆ ಅದನ್ನಾಲಿಸಿ ಊರ್ವಶಿಯಲ್ಲಿ ಬಹುವಾಗಿ ಹೊಗಳಿ ಮಾತಾಡುವಳು. ಇದರಿಂದ ಕುಪಿತಳಾದ ಊರ್ವಶಿ ವಿಷಬಿಂದುಸೇಚನದ ಮೂಲಕ ಕಂಜಾಕ್ಷ ಅವಸಾನ ಹೊಂದುವಂತೆ ಮಾಡುವಳು. ಗಾಂಧಾರದ ಪದ್ಧತಿಯಂತೆ ಮೃತರ ದೇಹವನ್ನು ದಹಿಸದೇ, ಅಲ್ಲಿನ ಬೇತಾಳನಿಗೆ ಕೊಡಬೇಕಾಗಿದ್ದು, ಅದಕ್ಕಾಗಿ ರಾಜ ದುಃಖಿಸುತ್ತಿದ್ದಾಗ ರಾಜಹಂಸ ಸಮಾಧಾನಿಸಿ ಚಂದ್ರಾಯುಧದಿಂದ ಬೇತಾಳನನ್ನು ಸೋಲಿಸುವುದು. ಶರಣಾದ ಬೇತಾಳ ನೆನೆದಾಗ ಬರುತ್ತೇನೆ ಎಂದು ಆಶ್ವಾಸನೆ ನೀಡುವನು.

ಇತ್ತ ಸ್ವರ್ಗಕ್ಕೆ ತೆರಳಿದ ಊರ್ವಶಿಗೆ ತನ್ನ ತಪ್ಪು ಅರಿವಾಗಿ, ಅಮೃತಸೇಚನದಿಂದ ಕಂಜಾಕ್ಷನಿಗೆ ಮರಳಿ ಜೀವದಾನ ಮಾಡಿ ಕ್ಷಮಾಯಾಚನೆ ಮಾಡಿ ತೆರಳುವಳು. ಕಂಜಾಕ್ಷನು ಊರ್ವಶಿಯಲ್ಲಿ ಮೋಹವಿರಿಸಿ, ಆಕೆಗಾಗಿ ಹಂಬಲಿಸಿ ಕೃಶನಾಗುವನು.

ಇದನ್ನರಿತ ರಾಜಹಂಸ ಬೇತಾಳನ ಸಹಾಯದಿಂದ ಸ್ವರ್ಗಕ್ಕೆ ಹೋಗಿ ಊರ್ವಶಿಯನ್ನು ತರಲು ಸಿದ್ಧನಾಗುವನು. ಸ್ವರ್ಗದಲ್ಲಿ ಸುರಪನ ಸುತೆ ಸೂರ್ಯಕಾಂತಿಯನ್ನು ಕಂಡು ಪರಸ್ಪರ ಮೋಹಿತರಾಗುವರು. ವಿಷಯ ತಿಳಿದ ದೇವೇಂದ್ರ ಕೆರಳಿ ಪರಿವಾರದೊಂದಿಗೆ ಯುದ್ಧಕ್ಕೆ ಬಂದಾಗ ಚಂದ್ರಾಯುಧದ ಬಲದಿಂದ ಅವರನ್ನು ನಿಗ್ರಹಿಸುವನು. ಆಗ ದೇವತೆಗಳು ಶಿವನ ಮೊರೆಹೊಕ್ಕಾಗ, ಶಿವನಗಣಗಳಿಗೂ ರಾಜಹಂಸನಿಗೂ ಕಾಳಗವಾಗಿ ಅವರೆಲ್ಲಾ ಸೋಲುವರು. ಶಿವನೇ ರಣಕ್ಕೆ ಬಂದಾಗ ಬ್ರಹ್ಮದೇವ ಬಂದು ತಡೆಯುವನು. ನಂತರ ಸೂರ್ಯಕಾಂತಿ ರಾಜಹಂಸರ ವಿವಾಹ ನಡೆಯುತ್ತದೆ.

ಕಂಜಾಕ್ಷನು ವೀಣಾವಾದನ ಮಾಡಿ ನೆನೆದಾಗ ಊರ್ವಶಿ ಬಂದು ರಮಿಸುವುದಾಗಿ ಹೇಳಿ, ದೇವೇಂದ್ರ ಅವರನ್ನು ಬೀಳ್ಕೊಡುತ್ತಾನೆ. ಗಾಂಧಾರಕ್ಕೆ ಬಂದ ರಾಜಹಂಸ ಕೆಲದಿನ ಅಲ್ಲಿದ್ದು ನಂತರ ಇಬ್ಬರು ಮಡದಿಯರೊಂದಿಗೆ ಮಾಳವಕ್ಕೆ ಮರಳಿ ಸುಖದಿಂದ ರಾಜ್ಯಭಾರ ಮಾಡುತ್ತಾನೆ. ಗಾಂಧಾರಕ್ಕೆ ಕಂಜಾಕ್ಷ ರಾಜನಾಗಿ ಪ್ರಜಾಪರಿಪಾಲನೆ ಮಾಡುವನು.

**ಕವಿ ಪರಿಚಯ : (ಆಧಾರ: ಕರ್ನಾಟಕ ಕವಿ ಚರಿತ್ರೆ – ಡಾ. ಕಬ್ಬಿನಾಲೆ ವಸಂತ ಭಾರದ್ವಾಜ)**

ಕೀರಿಕ್ಕಾಡು ಮಾಸ್ತರ್ ವಿಷ್ಣು ಭಟ್ಟರವರು ಕಾಸರಗೋಡು ತಾಲೂಕಿನ ಕುಂಬುಡಾಜೆ ಗ್ರಾಮದವರು. ಇವರ ಕಾಲ ೧೯೧೩ – ೧೯೮೬. ತಂದೆ ಕೇಶವ ಭಟ್ಟ ಮತ್ತು ತಾಯಿ ಲಕ್ಷ್ಮಿ. ಕಾದಂಬರಿ, ಕಾವ್ಯ, ಆತ್ಮಕಥೆ ಮುಂತಾದ ಸಾಹಿತ್ಯ ಪ್ರಕಾರಗಳಲ್ಲಿ ಕೃಷಿ ಮಾಡಿದವರು. ಶ್ರೀಯುತರು ನಮ್ಮ ನಾಡಿನ ಖ್ಯಾತ ಯಕ್ಷಗಾನ ಅರ್ಥಧಾರಿಗಳು ಹೇಗೋ, ಹಾಗೆಯೇ ಖ್ಯಾತ ಯಕ್ಷಗಾನ ಕವಿಗಳು ಕೂಡ. ಯಕ್ಷಗಾನ ಅರ್ಥಗಾರಿಕೆಯಲ್ಲಿ ಶೇಣಿ ಶೈಲಿ, ದೇರಾಜೆ ಶೈಲಿ ಎಂದೆಲ್ಲ ನಾವು ಗುರುತಿಸುವ ಹಾಗೆ ಕೀರಿಕ್ಕಾಡು ಮಾಸ್ತರ್ ಶೈಲಿಯನ್ನೂ ಪ್ರತ್ಯೇಕವಾಗಿ ಗುರುತಿಸಬಹುದು. ಶ್ರೀ ಶೇಣಿ ಗೋಪಾಲಕೃಷ್ಣ ಭಟ್ಟರು ಸೇರಿದಂತೆ ಅವರ ಶಿಷ್ಯರನೇಕರು ಇಂದು ಯಕ್ಷರಂಗಭೂಮಿಯಲ್ಲಿ ಉತ್ತಮ ಕಲಾವಿದರಾಗಿ ವಿಜೃಂಭಿಸುತ್ತಿದ್ದಾರೆ. ಅವರು ಯಕ್ಷಗಾನದ ಆಶುಕವಿಗಳು. ಪ್ರಸಂಗ ರಚನೆಯ ಮಟ್ಟಿಗೆ ಅವರದು ಗಿನ್ನಿಸ್ ದಾಖಲೆಯೆಂದರೂ ತಪ್ಪಾಗಲಾರದು.

ಇವರು ಬರೆದ ಪ್ರಸಂಗಗಳು: ಅಂಬಾಲಿಕಾ, ಅಂಬಿಕಾ ಮಹಾತ್ಮೆ (ದುರ್ಗಾ ಮಹಾತ್ಮೆ), ಅಮೋಘ ವರ್ಷ ನೃಪತುಂಗ, ಅಶೋಕ ಸುಂದರಿ, ಅಶ್ರುಬಿಂದುಮತಿ, ಅಷ್ಟಾಕ್ಷರೀ ಮಹಿಮೆ (ರತ್ನಗ್ರೀವ), ಇಂದ್ರೋತ್ಕರ್ಷ, ಇಕ್ಷ್ವಾಕು ವಿಜಯ, ಊರ್ವಶಿ ಪುರೂರವ, ಏಕವೀರ ಏಕಾವಳಿ, ಕಂಜಾಕ್ಷಿ ಕಲ್ಯಾಣ, ಕಂದುಕಾವತಿ, ಕಚೋಪಖ್ಯಾನ, ಕನಕಲೇಖಾ, ಕರ್ಣಾವಸಾನ, ಕಲ್ಪಸುಂದರಿ ಕಲ್ಯಾಣ (ಉಪಾಹಾರವರ್ಮ ವಿಜಯ), ಕಾಮೋದೆ, ಕಾಲನೇಮಿ ಕಾಳಗ, ಕಾಲಯವನ ಕಾಳಗ, ಕುಲಬಾಲಿಕಾ, ಕುಶಲವ, ಕ್ಷೇಮಂಕರೀ ದೇವಿ ಮಹಿಮೆ, ಗಜಾಸುರ ಮೋಕ್ಷ, ಗೋಕರ್ಣ ಕ್ಷೇತ್ರ ಮಹಾತ್ಮೆ, ಗೌತಮ ವಿಜಯ, ಚಂದ್ರಪ್ರಭಾ ಪರಿಣಯ, ಚಂದ್ರಸೇನಚಿಂತಾಮಣಿ, ಚಂದ್ರಹಾಸ, ಜಯಸಿಂಹ ವಿಜಯ, ಜರಾಸಂಧ ಪರಾಭವ, ಜಾನಭ ಚರಿತ್ರೆ, ದುರ್ಗಾ ಮಹಿಮೆ (ಅಂಬಿಕಾ ಮಹಾತ್ಮೆ), ದುರ್ಜಯೋಪಖ್ಯಾನ, ದೂಷಣಾಸುರ ಕಾಳಗ, ನವಮಾಲಿಕಾಪರಿಣಯ, ಪಂಚಾಕ್ಷರಿ ಮಹಾತ್ಮೆ, ಪಾಂಚಜನ್ಯ, ಪುಷ್ಪವೇಣಿ ಕಲ್ಯಾಣ, ಪುಷ್ಪೋದ್ಭವ, ಪ್ರದೋಷ ವ್ರತ ಮಹಾತ್ಮೆ, ಪ್ರಭಾವತಿ ಪರಿಣಯ, ಬಭ್ರುವಾಹನ, ಬಾಲಚಂದ್ರಿಕಾ, ಬೃಹ್ಮ ಯಜ್ಞ (ಗಾಯತ್ರಿ ಮಹಿಮೆ) (ಗಾಯತ್ರಿ ಪರಿಣಯ), ಭಕ್ತ ಪ್ರಹ್ಲಾದ, ಭಕ್ತ ಸುಬಾಹು, ಭಕ್ತ ಸುಮದ (ಶ್ರೀ ರಾಮಾಶ್ವಮೇಧದ ಭಕ್ತ ಸುಮದ), ಭಕ್ತ ಸುರಥ, ಭಾನುಮತಿ ಪರಿಣಯ, ಭೀಮಶಂಕರ ಮಹಿಮೆ, ಭ್ರಮರಕುಂತಳೆ ಕಲ್ಯಾಣ, ಭ್ರಮರವೇಣಿ ಸ್ವಯಂವರ, ಮಂಜುವಾಹಿನಿ, ಮಣಿಕರ್ಣಿಕಾ, ಮಣಿಪ್ರಭಾ ಪರಿಣಯ, ಮದ್ಯೋಚ್ಚಾಟನ, ಮಿತ್ರಗುಪ್ತ ವಿಜಯ, ಮೃಗಾವತಿ ಪರಿಣಯ (ವೀರ ಸಹಸ್ರಾನಿಕ), ರಕ್ಷರತ್ನಾಹಾರ (ಹರಿರತ್ನಹಾರ), ರಕ್ಷಾಕವಚ (ತುಳಸಿ ಶಂಖಚೂಡ), ರಕ್ಷಾಮಣಿ (ದುರ್ಜಯೋಪಖ್ಯಾನ), ರಘುನಾಥ ವಿಜಯ, ರಜಿಯಾಭ್ಯುದಯ, ರಣಮಲ್ಲವಿಜಯ, ರತ್ನ ಪ್ರಭಾ, ರಾಜಹಂಸ ಪರಾಜಯ (ರಾಜವಾಹನ ವಿಜಯ), ರಾಜಹಂಸ ವಿಜಯ, ರಾಜಾ ಸುದರ್ಶನ, ರಾಜೇಯ ಪರಾಜಯ, ರುಕ್ಮವತೀ ಕಲ್ಯಾಣ, ವಾಮಲೋಚನೆ, ವಿಶ್ರುತ ವಿಜಯ, ವೀರ ಅಭಿಮನ್ಯು, ವೀರ ಬಭ್ರುವಾಹನ, ವೀರ ವಜ್ರಾಂಗ, ವೀರಮಣಿ, ವೀರಮಣಿ ಕಾಳಗ, ವೀರರಮಣಿ, ವೀರೇಶ್ವರ, ವ್ಯಾಘ್ರಾಸುರ ಕಾಳಗ (ವ್ಯಾಘ್ರಾಸುರ ಮೋಕ್ಷ), ಶಿವ ಕವಚ, ಶಿವನಾಮ ಮಹಿಮೆ (ಶಿವಭಕ್ತ ಸುಪ್ರಿಯ), ಶಿವಪಂಚಾಕ್ಷರಿ ಮಹಾತ್ಮೆ (ಶ್ವೇತಕುಮಾರ ಮಹಿಮೆ), ಶಿವಮಂತ್ರ ಮಹಿಮೆ (ದಾಶಾರ್ಹ ಚರಿತೆ), ಶುಭಾಂಗಿ, ಶೃಗಾಲ ಕಾಳಗ, ಶ್ರೀಮತೀ ಪರಿಣಯ (ಸಹಸ್ರಕಂಠ ರಾವಣ), ಶ್ರೀರಾಮಪಟ್ಟಾಭಿಷೇಕ, ಷಟ್ಪುರ ಮಥನ, ಸಾಹಸಚಂದ್ರ, ಸಾಹಾಸಾಂಬ, ಸೀತಾ ಪರಿತ್ಯಾಗ, ಸೀತಾಪಹಾರ, ಸೀತಾರಾಮವಿಜಯ, ಸೀತಾವಿಜಯ, ಸೀಮಂತಿನೀ ಕಲ್ಯಾಣ, ಸುಮದಾಖ್ಯಾನ, ಸುಲೋಚನಾ ಸ್ವಯಂವರ, ಸೊಲಗಾವಸಾನ, ಸೋಮದತ್ತ ವಿಜಯ, ಸ್ವಯಂಪ್ರಭಾ ಪರಿಣಯ, ಸ್ವಾಮಿನಿಷ್ಠ ಎಚ್ಚಮ, ಹೇತ್ರ ಪ್ರಹೇತ್ರ

**ಟಿಪ್ಪಣಿ:**

# ಪ್ರಸಂಗ ಸಾಹಿತ್ಯ

**ಶಾರ್ದೂಲ ವಿಕ್ರೀಡಿತ ವೃತ್ತ**
ಶ್ರೀಕಾಂತಂ ಕಮಲಾಸನಾರ್ಚಿತಪದಂ | ಕಾರುಣ್ಯ ಕಲ್ಪದ್ರುಮಂ |
ಭೂಕಲ್ಯಾಣಕರಂ ಖಿಳಾವಳಿಹರಂ | ಕೌಮೋದಕೀಧಾರಣಂ ||
ನಾಕೇಶಾದ್ಯಮರೌಘ ಪೂಜಿತಪದಂ | ನಾಗೇಂದ್ರಶಾಯಿಂ ವಿಭುಂ |
ವೈಕುಂಠಂ ನಿಗಮಾಗಮಾವಳಿನುತಂ | ಗೋಪಾಲಕೃಷ್ಣಂ ಭಜೇ || ೧ || || 1 ||

**ನಾಟಿ - ರೂಪಕ**
ಜಯ ಜಯ ಶ್ರೀಗಣನಾಯಕ |
ಜಯ ಜಯ ಸಿದ್ಧಿವಿನಾಯಕ |
ಜಯ ಜಯ ಮಂಗಲದಾಯಕ |
ಜಯ ಜಯ ಸಿರಿಬೆನಕ || ೧ ||

ಶರಣಾಗತ ಜನಪೋಷಿತ |
ಕರುಣಾಕರ ಮಣಿ ಭೂಷಿತ |
ಸುರಸನ್ನುತ ಸುಖಭಾಷಿತ |
ಸುರುಚಿರ ಶೋಭಾಚರಿತ || ೨ ||

ಮಧುಪುರ ಸ್ಥಿರ ಲಂಬೋದರ |
ಸದಮಲ ಪಾಶಾಂಕುಶಧರ |
ಮದಖಳಕುಲಹರ ಸುಂದರ |
ಪದಕೆರಗುವೆ ಭವದೂರ || ೩ || || 4 ||

**ಭಾಮಿನಿ**
ವಾಣಿಯನು ಪ್ರಾರ್ಥಿಸುತ ಶ್ರೀ ಸ |
ರ್ವಾಣಿ ರುದ್ರಾಣಿಯನು ಪೂಜಿಸಿ |
ಧ್ಯಾನಿಸುತ ಪರಶಿವನ ಸುಬ್ರಹ್ಮಣ್ಯನನು ನೆನೆದು ||
ಮಾನಸದಿ ಕೊಂಡಾಡಿ ದಿವಿಜವಿ |
ತಾನವನು ಭಾರ್ಗವಿಗೆ ವಂದಿಸಿ |
ಮೌನಿ ಪುರಪತಿ ವಿಷ್ಣುಮೂರ್ತಿಯ ದಯದೊಳುಸುರುವೆನು || ೧ || || 5 ||

**ಸೌರಾಷ್ಟ್ರ - ತ್ರಿವುಡೆ**
ಇಂದ್ರಸುತ ಪಾರ್ಥನಿಗೆ ಶ್ರೀ ಗೋ |
ವಿಂದ ಬೋಧಾಮೃತದೊಳತ್ಯಾ |
ನಂದಗೊಳಿಸುತ ವಿವಿಧ ಚರಿತೆಗ | ಳಿಂದ ಮುದದಿ || ೧ ||

ತತ್ವಸಾರವ ವಿಸ್ತರಿಸುತಿರೆ |
ಪಾರ್ಥನತ್ಯುತ್ಸಾಹದಿಂದಲಿ |
ಬಿತ್ತರಿಸು ಮುಂಗಥೆಯನೆನೆ ಪರ | ಮಾತ್ಮನೆಂದ || ೨ || || 7 ||

**ಭಾಮಿನಿ**
ಚಿತ್ರವಿಸು ಕಲಿ ಪಾರ್ಥ ಹಿಂದೆ ಸ |
ಮಸ್ತ ದೇಶದೊಳಧಿಕ ವೈಭವ |
ದುತ್ಸವದಿ ರಂಜಿಸುವ ಮಾಳವವೆಂಬ ದೇಶವನು ||
ಸತ್ವ ಭುಜಬಲ ಹಂಸಪಾದ ನೃ |
ಪೋತ್ತಮನು ಸದ್ಧರ್ಮದಿಂದಾ |
ಳುತ್ತ ಸಕಲರು ಶ್ಲಾಘಿಸಲು ಸಂಪತ್ತಿನಿಂದಿರ್ದ || ೧ || || 8 ||

**ಕಂದ ಪದ್ಯ**
ಇಂತೊಪ್ಪುವ ನೃಪತಿಲಕಂ |
ಸಂತಸದಿಂದೊಂದಿನೋಲಗವನೀಯುತಂ ||
ಮುಂತೆ ವಿರಾಜಿಪ ಸಭೆಯೊಳ್ |
ಮಂತ್ರೀಶ್ವರನೊಡನೆ ಪೇಳ್ದನೀ ಬಗೆಯಿಂದಂ || ೧ || || 9 ||

**ಭೈರವಿ - ಝಂಪೆ**
ಕೇಳಯ್ಯ ಮಂತ್ರೀಶ | ಮಾಳವವನಿದುವರೆಗೆ |
ಪಾಲಿಸುತ ಸತ್ಕೀರ್ತಿ | ತಾಳಿದೆವು ಜಗದಿ || ೧ ||

ಇಂದ್ರನಾಸ್ಥಾನವನು | ನಿಂದಿಸುವ ಸೌಭಾಗ್ಯ |
ದಿಂದ ನಮ್ಮೀ ಸಭೆಯ | ಚಂದವೇನ್ಮಿಗಿಲು || ೨ ||

ಸಕಲ ಪ್ರಜೆಗಳು ನಿತ್ಯ | ಸುಖದಿಂದ ಬಾಳುವರು |
ಶಕುತಿಯನು ನಮ್ಮೊಡನೆ | ಪ್ರಕಟಿಸುವರಿಲ್ಲ || ೩ ||

ವಂಶರಂಜಕ ರಾಜ | ಹಂಸ ಮೇಣವನನುಜ |
ಹಂಸಗಮನರು ರಾಜ | ಹಂಸರಹ ಸುತರು || ೪ ||

ಮೋದವಾಯ್ತೆನುತಲಾ | ಮೇದಿನಿಪನೆನೆ ದೀರ್ಘ |
ಸಾಧುಯೆಂಬೋರ್ವ ಯತಿ | ಸಾದರದಿ ಬರಲೂ || ೫ ||

ಬಂದ ಯತಿವರ್ಯನಿಗೆ | ವಂದಿಸುತ ಪೀಠವಿ |
ತ್ತಂದದಿಂ ಕುಳ್ಳಿರಿಸು | ತೆಂದ ಧರಣೀಶ || ೬ || || 15 ||

**ಕೇದಾರಗೌಳ - ಅಷ್ಟ**
ಎತ್ತಣಿಂದೈತಂದಿ | ರಿತ್ತ ಮಹಾಮಹಿ |
ಮೋತ್ತಮ ಮುನಿವರ್ಯರೆ ||
ಪೃಥ್ವಿ ಕಲ್ಯಾಣ ಕಾ | ರ್ಯಾರ್ಥ ಸದ್ಧರ್ಮ ಪ್ರ |
ವೃತ್ತಿ ಮಾರ್ಗೋದ್ಯಮರೆ || ೧ ||

ಪಾದದರ್ಶನದಿಂದ | ಲಾದುದಾನಂದ ಸ |
ರ್ವೋದಯವಾಯ್ತೆಮಗೆ ||
ನಾ ಧನ್ಯನೀಗ ಸಂ | ಪಾದಿಸಿದೆನು ಪುಣ್ಯ |
ಸಾಧನವಿನಿತು ಮಿಗೆ || ೨ ||

ಯೇನು ಕಾರ್ಯದೊಳು ನ | ಮ್ಮೀ ನಗರಕೆ ಬಂದಿ |
ರೇನಾಗಬೇಕೆನ್ನಿಂದ ||
ಮೌನೀಶರಪ್ಪಣೆ | ಗಾನು ಸಿದ್ಧನು ಯೆನ |
ಲ್ಲಾನುರಾಗದೊಳಗೆಂದ || ೩ || || 18 ||

**ಯರಕಲ ಕಾಂಬೋಧಿ - ಅಷ್ಟ**
ಧಿರುರೆ ಮೆಚ್ಚಿದೆನಯ್ಯ | ಧರಣೀಂದ್ರ ನಿನಗೇ |
ಸರಿಯಿಲ್ಲ ಜಗದೊಳು | ಹರುಷವಾಯ್ತೆನಗೇ || ಪ ||
ಸುರಪಾಲಕನ ಘನ | ತರದ ಸುಧರ್ಮೆಯ |
ಸಿರಿಯ ಧಿಕ್ಕರಿಸುವ | ತೆರದಿಂದಲೆಸೆಯುವ |
ಪರಮ ಮಂಗಲ ಸಭೆಯೂ || ನಿನ್ನದು ನೋಡ |
ಲರರೆಯೇನೀ ಪ್ರಭೆಯೂ | ಎಂಥವನಾದ |
ಬರ್ೆರಳು ಕಚ್ಚುವ ಶೋಭೆಯೂ | ವರ್ಣಿಸಿ ತುದಿ |
ಬರದಿದು ಸೌಭಾಗ್ಯ | ಕುರು ನೆಲೆಮನೆಯು || ಧಿರುರೆ || ೧ ||

ನಿನ್ನಯ ಹಿರಿಸುತ | ನುನ್ನತ ಬಲಯುತ |
ನಿನ್ನುಮುಂದತಿಖ್ಯಾತ | ನೆನ್ನುತ ಮೆರೆವಾಗ |
ನೆನ್ನುವದನ್ನರಿದೂ || ಅವನ ಶ್ರೇಯ |
ಸ್ಸನ್ನೆಲ್ಲ ನಿನಗೊರೆದೂ | ಮುಂದಕ್ಕವ |
ಮಾನ್ಯನಾಗುತ ಮೆರೆದೂ | ಬಾಳುವ ಬಗೆ |
ಯನ್ನೆ ಯೋಚಿಸಿ ಬಂದೆ | ನೆನ್ನುವ ಕೇಳದು || ೨ ||

ಇದೋ ನೋಡು ಚಂದ್ರಾ | ಯುಧ ಘೋರ ಜಟಮುನಿ |
ಯಿದ ಕೃತಯುಗದಲ್ಲಿ | ಪದುಮಜನಿಂದ ಪ |
ಡೆದ ರಕ್ಕಸರ ಕೊಲ್ಲಲು || ತ್ರೈಲೋಕದೊ |
ಳ್ಬದಲಿಲ್ಲವೈ ಗೆಲ್ಲಲು | ಅದ್ಭುತ ಶಕ್ತಿ |
ಮದನಾರಿಗಳವಲ್ಲವು | ಪರಂಪರೆಯಿಂದ |
ಲೊದಗಿತೆನ್ನಯ ವಶ | ಕದನೀವೆ ಕೇಳು || ೩ || || 21 ||

**ವಾರ್ಧಕ**
ಧರಿಸುತೀ ಚಂದ್ರಾಯುಧವ ಮೂರು ವತ್ಸರಂ |
ಧರಣಿಯಂ ಸಂಚರಿಸೆ ಬಳಿಕೆಲ್ಲ ಲೇಸಕ್ಕು |
ಹರುಷದಿಂದೀವೆನಿದನೀ ರಾಜಹಂಸಗೆಂದರುಹುತಾ ಕುವರಗಿತ್ತು ||
ಹರಸಿ ಬೀಳ್ಕೊಟ್ಟು ನಿರ್ಯಾಣಕೈದಲ್ಬಳಿಕ |
ಪರಮಸಂತೋಷದಿಂದಾ ಕುಮಾರಂ ಪಿತನ |
ಚರಣಾರವಿಂದಕ್ಕೆ ವಂದನೆಯ ಗೈಯುತ್ತಲಿಂತೆಂದನತಿ ಧೈರ್ಯದಿ || ೧ || || 22 ||

**ಮಾರವಿ - ಏಕ**
ತಾತನೆ ಕೇಳ್ಮುನಿ | ನಾಥನೊಲಿದು ಸಂ |
ಪ್ರೀತಿಯೊಳಿತ್ತಿಹನು ||
ಖ್ಯಾತ ಚಂದ್ರಾಯುಧ | ವೀತಿರೆ ಮೂರರೊ |
ಳೀತರ ಭಯವಿನ್ನು || ೧ ||

ವತ್ಸರ ಮೂರು ಸ | ಮಸ್ತ ಧರಾವಳಿ |
ಸುತ್ತಿ ನಡೆದು ಮುನಿಯು ||
ಇತ್ತಿಹ ನೇಮವ | ನರ್ತಿಯೊಳ್ನಡೆಸಿ ಕೃ |
ತಾರ್ಥನೆನಿಪೆ ಖರೆಯು || ೨ ||

ಚಂದ್ರಾಯುಧ ಕೈ | ಹೊಂದಿರೆ ಭಯವಿ |
ಲ್ಲಿಂದೇ ಹೊರಡುವೆನು ||
ಚಂದದೊಳಪ್ಪಣೆ | ಯಂ ದಯಪಾಲಿಪು |
ದೆಂದೆನಲುಸುರಿದನು || ೩ || || 25 ||

**ಶಂಕರಾಭರಣ - ತ್ರಿವುಡೆ**
ಮಗನೆ ಭಾಗ್ಯದ ಮಣಿಯೆ ನಿನ್ನಯ |
ಬಗೆಯು ಯೋಗ್ಯವಿದಾದರು ||
ಜಗವ ಸುತ್ತುವದೆನಲು ಸುಲಭವೆ | ಸುಗುಣರನ್ನ || ೧ ||

ಆದರಾ ಮೌನೀಂದ್ರುನಪ್ಪಣೆ |
ಯಾದ ತೆರದಲಿ ನಡೆಯದೆ ||
ಹಾದಿಯಿಲ್ಲದರಿಂದ ಕಾರ್ಯವ | ಸಾಧಿಸುವುದು || ೨ ||

ಪರಮ ಮಂಗಲಮೂರ್ತಿ ವಿಶ್ವಂ |
ಭರನ ಪಾದವ ಸ್ಮರಿಸಿಕೋ ||
ಹರಸುವೆನು ಸುಖವಾಗಿ ಬಾರೆಂ | ದರಸ ನುಡಿದ || ೩ || || 28 ||

**ವಾರ್ಧಕ**
ಇಂತರಸನಪ್ಪಣೆಯನೀಯಲಾ ರಾಜಹಂ |
ಸಂ ತನ್ನ ಜನನಿಯಿಂ ನೇಮವಂ ಕೈಗೊಳುತ |
ಲಾಂತು ಚಂದ್ರಾಯುಧವನುತ್ತರ ದಿಶಾಪಥದೊಳೈದಿದಂ ಕಾಲ್ನಡೆಯೊಳು ||
ಮುಂತವಂ ವಿಧವಿಧದ ತೀರ್ಥಂಗಳಂ ಮೀಯು |
ತಂ ತಡೆಯದೆರಡು ವತ್ಸರ ಸುತ್ತಿ ನಡೆದು ಯಶ |
ವಾಂತ ಮುನಿ ವಾಲ್ಮೀಕಿಯಾಶ್ರಮಕೆ ಸಾರ್ದವಗೆ ಮಣಿಯೆ ಹರಸುತಲೆಂದನು || ೧ || || 29 ||

**ಭೈರವಿ - ಝಂಪೆ**
ಯಾರು ನೀನೆಲೆ ಮಗನೆ | ಯೀ ರೀತಿಯಿಂದ ಮನೆ |
ಯೂರೆಲ್ಲ ಬಿಟ್ಟು ಬರೆ | ಕಾರಣವದೇನು || ೧ ||

ನಿನ್ನ ನಾಮವನುಸುರು | ಜನ್ಮಭೂಮಿಯ ಪೆಸರು |
ಇನ್ನೇನು ಪಡೆದವರು | ಧನ್ಯರವರಾರು || ೨ ||

ರಾಜಸುತನಂತಿರುವ | ತೇಜಸ್ವಿನಿಂ ಮೆರೆವ |
ನೀ ಜವದಿ ನಿನ್ನಿರವ | ಮಾಜದೊರೆ ನಿಜವ || ೩ || || 32 ||

**ಕಂದ ಪದ್ಯ**
ಇನಿತಾ ಮುನಿಕುಲತಿಲಕಂ |
ಜನಪತಿಸುತ ರಾಜಹಂಸನಂ ಕೇಳಲ್ಕಂ ||
ಮನದೊಳ್ ಧೈರ್ಯವನಾಂತವ |
ಮಣಿದೆದ್ದೆಂದಂ ನಯದಲಿ ವಾಲ್ಮೀಕಿಯೊಳುಂ || ೧ || || 33 ||

**ಸುರುಟಿ - ಏಕ**
ಲಾಲಿಸೆನ್ನ ವಿಷಯಾ | ಪರಮ ದ |
ಯಾಳು ಮೌನಿವರ್ಯಾ ||
ಭೂಲೋಕದಿ ಸುವಿ | ಶಾಲದೊಳೊಪ್ಪುವ |
ಮಾಳವ ದೇಶವ | ನಾಳುತಲೆಸೆಯುವ || ೧ ||

ರಾಜಹಂಸಪಾದಾ | ನಂದನ |
ರಾಜಹಂಸನಾದಾ ||
ನಾ ಜಗ ಸುತ್ತೆ ನಿ | ರ್ವ್ಯಾಜದೆ ಪೊರಟವ |
ನೀ ಜಯಪಾದವ ಸಾಜದೆ ಕಂಡವ || ೨ ||

ಮುನಿಪ ದೀರ್ಘಸಾಧೂ | ಬಂದತಿ |
ಘನತೆಯಿಂದಲೊಲಿದೂ ||
ಎನಗಾಯುಧವಿದ | ರನು ಕರುಣಿಸಿ ಜಗ |
ವನು ತಿರುಗಲು ಪೇ | ಳ್ದನು ಮೂರ್ವತ್ಸರ || ೩ || || 36 ||

**ವಾರ್ಧಕ**
ಮುನಿಪಾಲನಿತ್ತು ಚಂದ್ರಾಯುಧವ ಧರಿಸುತಾ |
ತನ ನೇಮದಂತೆರಡು ವರ್ಷವಾಯ್ತೀಗ ಧರೆ |
ಯನು ಸುತ್ತುವುದು ಮುಂದಕುಳಿದ ವತ್ಸರವೊಂದ ಸನ್ನಿಧಿಯ ಸೇವೆಗಿರಲು ||
ಅನುಮತಿಯನಿತ್ತೆನಗೆ ಬ್ರಹ್ಮತ್ವವೆಂತೆನುವ |
ಘನತತ್ವಮಾರ್ಗವಂ ಬೋಧಿಸುತಲುದ್ಧರಿಪು |
ದೆನುತ ಮಗುಳಭಿವಂದಿಸಲು ರಾಜಹಂಸನಂ ಪಿಡಿದೆತ್ತಿ ಋಷಿಯೆಂದನು || ೧ || || 37 ||

**ಕೇದಾರಗೌಳ - ಅಷ್ಟ**
ಹರುಷವಾಯಿತು ನಿನ್ನ | ಚರಿತೆಯ ಕೇಳ್ದಲೆ |
ಧರಣಿಪ ನಂದನನೆ ||
ವರುಷವೊಂದನು ದಾಟು | ವರೆ ನಮ್ಮ ಶಿಷ್ಯನಾ |
ಗಿರಲಾಶೀರ್ವದಿಪೆ ನಾನೆ || ೧ ||

ವೇದಾಂತ ತತ್ವವ | ಸಾಧಿಸಲತಿಕಷ್ಟ |
ವಾದರೂ ನಿನ್ನಿಚ್ಛೆಯು ||
ಬೋಧಿಪೆನರಿಯುವ | ಹಾದಿ ನಿನಗೆ ಗೆಲ |
ವಾದರೆ ಧನ್ಯತೆಯು || ೨ ||

ಎಂದರುಹುತ ಶಿಷ್ಯ | ನೆಂದು ಸ್ವೀಕರಿಸಿ ಮೌ |
ನೀಂದ್ರ ಯೋಗಾಭ್ಯಾಸದ ||
ಒಂದೊಂದೆ ಮಾರ್ಗವ | ಮುಂದ್ವರಿಸುತ ಪೂರ್ಣ |
ಹೊಂದಿಸಲೆಳಸೆ ಸದಾ || ೩ || || 40 ||

**ಭಾಮಿನಿ**
ನರನೆ ಕೇಳೀ ತೆರದಿ ಯೋಗೀ |
ಶ್ವರನು ಬೋಧಿಸಿ ರಾಜಹಂಸನ |
ಪರಿಣತನಗೊಳಿಸಿದನು ಯೋಗಾಭ್ಯಾಸ ತತ್ವದೊಳು ||
ಮೆರೆಯುತವನ ಮನಸ್ಕಭಾವದ |
ಗುರಿಯ ಮುಟ್ಟಲು ಭಾಸ್ಕರಾಸ್ತ್ರವ |
ಕರುಣಿಸಿದನಿಂತಾಗ ಸಂದುದು ವತ್ಸರವದೊಂದು || ೧ || || 41 ||

**ಸೌರಾಷ್ಟ್ರ - ತ್ರಿವುಡೆ**
ಇತ್ತಲೀ ತೆರನಾಗೆ ವಿಂಧ್ಯಾ |
ಪತ್ತನದಿ ದೀರ್ಘಾಕ್ಷನೆನ್ನುವ |
ಧೂರ್ತನೋಲಗವಿತ್ತು ಸಭೆಯೊಳು | ಬಿತ್ತರಿಸಿದ || ೧ ||

ಕೇಳಿರೈ ಖಳರೆಲ್ಲ ನಮಗೀ |
ರೇಳುಲೋಕದೊಳಾರು ಸರಿ ದಿವಿ |
ಜಾಳಿ ನಡುಗುತಲಿಹುದು ನಮ್ಮಯ | ದಾಳಿಗಂಜಿ || ೨ ||

ಮಾನವರ ಪಾಡೇನು ನಮ್ಮ ಸ |
ಮಾನ ಸಂಪತ್ತಾರಿಗೆನುತಿರೆ |
ಮೌನಿ ನಾರದ ಹರನ ನಾಮವ | ಗಾನಗೈದು || ೩ ||

ಬರಲು ಖಳ ಕುಳ್ಳಿರಿಸಿ ಪೂಜಿಸಿ |
ಭರದಿ ಬಂದಿಹ ಕಾರ್ಯವೇನೆಂ |
ದರುಹಬೇಕೆನಲೆಂದ ನಾರದ | ದುರುಳನೊಡನೆ || ೪ || || 45 ||

**ಬೇಗಡೆ - ಏಕ**

ಏನನೆಂಬೆನು | ದಾನವಾಧೀಶಾ | ಕಂಡೀಗ ನಿನ್ನಾ |
ಸ್ಥಾನ ವೈಭವ | ಮಾನಸಕೆ ತೋಷಾ ||
ಮಾನನಿಧಿ ಕೇ | ಳೀ ನವೀನ ವಿ |
ಧಾನ ವೈಭವ | ನಾನು ಜಗದಲಿ |
ಕಾಣಲಿಲ್ಲ ಪ್ರ | ಧಾನವಿದುವೈ |
ಮಾನಿಕರಿಗಿ | ಲ್ಲಾನಲರಿಯೆನು || ೧ ||

ಮತ್ತೆ ತವ ಸಾ | ಮರ್ಥ್ಯಕೆಣೆಯಿಲ್ಲಾ | ಜಯ ಭಾಮಿನಿಯ ನೀ |
ನೆತ್ತಿಕೊಂಡೆ ಸ | ಮಸ್ತರೊಳು ಮಲ್ಲಾ ||
ಸ್ತುತ್ಯವಲ್ಲ ಮ | ಹೋತ್ತರದ ಸ |
ತ್ಕೀರ್ತಿಗಳಿಸಿ ಪ್ರ | ಶಸ್ತನೆನಿಸಿಹೆ |
ಸತ್ಯವಾದರು | ಚಿತ್ತಕರಿದುದ |
ಬಿತ್ತರಿಸಲೆಂ | ದಿತ್ತ ಬಂದೆನು || ೨ ||

ಪೃಥ್ವಿಯಲಿ ಹೆಸ | ರೆತ್ತಲೆಸೆದಿರುವಾ | ಗಾಂಧಾರ ದೇಶದ |
ಕಾರ್ತಿಕೇಯನ | ಪುತ್ರಿಯಾಗಿರುವಾ ||
ವೃತ್ತಕುಚೆ ಶತ | ಪತ್ರನೇತ್ರೆಯು |
ಪುತ್ಥಳಿಯ ಪ್ರತಿ | ಮೂರ್ತಿಯವಳನು |
ಶಕ್ತಿಯಿಂ ಗೆಲಿ | ದಿತ್ತ ನೀ ತರೆ |
ಮತ್ತೆ ವೈಭವ | ಪೂರ್ತಿಯಾದುದು || ೩ || || 48 ||

**ಭಾಮಿನಿ**

ಅರಿತುದನು ನಾನೊರೆದೆ ನಿನಗದು |
ಸರಿಯೆನುತ ಮನಕಾದರೀ ಕ್ಷಣ |
ತೆರಳು ನೀ ನಾವೈದುವೆವು ಶಂಕರ ನಮೋ ಯೆನುತಾ ||
ಸುರ ಮುನಿಪ ಸಾಗಲ್ಕೆ ದಾನವ |
ರೆರೆಯನಹುದಹುದೆಂದು ಬಲಸಹ |
ಪೊರಟು ಗಾಂಧಾರವನು ಮುತ್ತಿದನಾಗ ವಿಕ್ರಮದಿ || ೧ || || 49 ||

**ಕಂದ ಪದ್ಯ**

ಚರನೊಳ್ ನಿಮ್ಮಯ ಭೂಪನ |
ತರಳೆಯ ಪರಿಣಯಕೆ ಬಂದೆನರುಹಿದನೆನಲುಂ ||
ಮರುಗುತ್ತೋಡುತ ಸಭೆಯೊಳ್ |
ಹರಿಪೀಠವನೇರ್ದ ಕಾರ್ತಿಕೇಯಗೆ ಮಣಿದೆಂದರ್ || ೧ || || 50 ||

**ಭೈರವಿ - ಝಂಪೆ**

ಚಿತ್ತವಿಸಿ ಸ್ವಾಮಿ ಬಲ | ಮೊತ್ತ ಸಹಿತೋರ್ವ ಖಳ |
ದೈತ್ಯ ನಮ್ಮಯ ಪುರವ | ಮುತ್ತಿದನು ಬಂದು || ೧ ||

ಪೇಳಲಂಜುವೆವವನ | ಖೂಳತನವನು ಕದನ |
ದಾಲೋಚನೆಯು ತಮ್ಮ | ಬಾಲೆಯಾಶೆಯಲಿ || ೨ ||

ಅರಸನ ಕುಮಾರಿಯನು | ವರಿಸುವರೆ ಬಂದಿಹೆನು |
ಅರುಹು ಸಾರೆನುತೆನ್ನ | ಜರೆದು ಕಳುಹಿದನು || ೩ || || 53 ||

**ಕೇದಾರಗೌಳ - ಝಂಪೆ**

ದೂತನೆಂದುದ ಕೇಳುತಾ | ಗಾಂಧಾರ |
ನಾಥನತಿ ಖತಿ ತಾಳುತ ||
ಪಾತಕಿಯದಾರವನಿಗೇ | ಇಂಥ ಸ |
ತ್ವಾತಿಶಯವೇ ದೈತ್ಯಗೆ || ೧ ||

ಕೇಳಿದೆಯ ಮಗನೆ ನೀನೂ | ಕಂಜಾಕ್ಷ |
ಖೂಳನಾ ಕೋಪವನ್ನು ||
ಬಾಲೆ ಕಂಜಾಕ್ಷಿಯಳನು | ಇಚ್ಛಿಸಿದ |
ಕಾಲಬಂತವನಿಗಿನ್ನು || ೨ ||

ದುಷ್ಟನೀತೆರದಿ ಬಂದು | ಬಲಸಹಿತ |
ಪಟ್ಟಣವ ಮುತ್ತಲಿಂದು ||
ದಿಟ್ಟರಾವೇಕೆ ಕ್ಷಣದಿ | ಅವನ ಮದ |
ವೆಷ್ಟಿರಲಿ ನಿಲಿಪೆ ರಣದಿ || ೩ ||

ಪೊರಮಡಲಿ ನಮ್ಮ ಸೈನ್ಯ | ಸ್ವತಹ ನಾ |
ತೆರಳುವೆನು ಯಾರು ಗಣ್ಯ ||
ಧುರಕಂಜಲುಂಟೆಯೆನಲು | ಕಂಜಾಕ್ಷ |
ನರಿತೆಂದನು ಖತಿಯೊಳು || ೪ || || 57 ||

**ಮಾರವಿ - ಏಕ**

ಬೊಪ್ಪನೆ ನೀನೆನ | ಗಪ್ಪಣೆ ಪಾಲಿಪು |
ದಪ್ಪಳಿಪೆನು ಖಳನ ||
ದರ್ಪದಿ ನಿಲೆ ಕಂ | ದರ್ಪಾರಿಯೆ ಬಿಡೆ |
ತಪ್ಪುವನಲ್ಲವು ನಾ || ೧ ||

ತಂಗಿಯ ಕೇಳಲ | ವಂಗೇನ್ ಧೈರ್ಯವು |
ಸಂಗತಿ ಪೊಸತಾಯ್ತು ||
ಭಂಗಿಸುತವನ ರ | ಣಾಂಗಣದೊಳು ಗಣ |
ರಿಂಗೀವೆನು ತುತ್ತು || ೨ ||

ರಕ್ಕಸರೆಷ್ಟೋ | ಲೆಕ್ಕದೊಳಿದ್ದರು |
ಲೆಕ್ಕಿಸುವೆನೆ ಧುರದಿ ||
ತಿಕ್ಕುತವರ ಜಯ | ಲಕ್ಷ್ಮಿಯ ತವ ಪಾ |
ದಕ್ಕರ್ಪಿಪೆ ಭರದಿ || ೩ || || 60 ||

**ಕಂದ ಪದ್ಯ**

ಎನಲಾ ಭೂಪಂ ಹರುಷದಿ |
ತನಯನ ಹರಸುತ ಬಲಸಹ ಹೋಗೆನಲಾಗಳ್ ||
ವನಜಾಕ್ಷಂ ಪಡೆಯೊಡನಂ |
ದನುಜಂಗಿದಿರಾಗಿ ಸಾಗಿ ತಡೆದಿಂತೆಂದಂ || ೧ || || 61 ||

**ಭೈರವಿ - ಏಕ**

ಧೂರ್ತ ಖಳಾಧಮ ನಮ್ಮ | ಪುರ |
ಮುತ್ತುತ ತೋರ್ಪೆಯ ಹಮ್ಮ ||
ಸತ್ವಗಳುಂಟೇ ಕ್ಷಣದಿ | ತಮ |
ಕತ್ತನು ಕೊಯ್ವೆನು ರಣದಿ || ೧ ||

ಹುಡುಗನೆ ನೀ ಬಾಯ್ಮುಚ್ಚು | ಏ |
ನಡರಿತೆ ತಲೆಯೊಳು ಹುಚ್ಚು ||
ಪೊಡವಿಪನಣುಗಿಯ ಪಡೆಯೆ | ಈ |
ಕಡೆಗೈತಂದುದು ಪಡೆಯೆ || ೨ ||

ತಂಗಿಯ ಬಯಕೆಯೆ ನಿನಗೆ | ನಾ |
ಭಂಗಿಪೆನೀ ಕ್ಷಣದೊಳಗೆ ||
ಸಂಗಡ ಬಲವೆಷ್ಟಿರಲು | ನಾ |
ಹಿಂಗೆನು ಸವರುವೆ ನಿಲಲು || ೩ ||

ಸೋದರಿಯೇ ನಿನಗವಳು | ಲೇ |
ಸಾದರೆ ನೀ ಶೀಘ್ರದೊಳು ||
ಪಾದಕ್ಕೊಪ್ಪಿಸು ತಂದು | ನಾ |
ಪೋದಪೆ ಬೇರಿಲ್ಲೊಂದು || ೪ ||

ಮುಂದಿನ್ನಾನುಡಿಯಾಡೆ | ರಸ |
ನೇಂದ್ರಿಯ ಕೊಯ್ವೆನು ಕೂಡೆ ||
ಮಂದಮತಿಯೆ ನಿನಗವಳು | ಎಂ |
ದೆಂದಿಗು ದೊರೆಯಳು ಕೇಳು || ೫ ||

ದೊರೆಯಳೆ ನೋಡುವೆನದನು | ನಾ |
ತರಿಯುತ ನಿಮ್ಮೆಲ್ಲರನು ||
ತರಳೆಯನೊಯ್ಯದೆ ಬಿಡೆನು | ಪುರ |
ಹರನೇ ಬರೆ ಬೆಲೆಗೊಡೆನು || ೬ ||

ಎನೆ ಕಂಜಾಕ್ಷನು ಕನಲಿ | ಶಿಖಿ |
ಕಣೆ ಬಿಡೆ ವರುಣಾಸ್ತ್ರದಲಿ ||
ದನುಜನು ಖಂಡಿಸಲಾಗ | ಅವ |
ನನಿಲಶರವ ಬಿಡೆ ಬೇಗ || ೭ ||

ಉರಗಾಸ್ತ್ರದೊಳದ ತರಿದು | ಆ |
ದುರುಳನು ತಾ ಬೊಬ್ಬಿರಿದು ||
ಉರುತರ ಶಕ್ತಿಯನೆಸೆಯೆ | ನೃಪ |
ತರಳನ ಸಾಹಸ ಕುಸಿಯೆ || ೮ || || 69 ||

**ಭಾಮಿನಿ**

ಸೋತವನು ಹಿಂದೋಡೆ ರಕ್ಕಸ |
ನಾಥನಾರ್ಭಟಿಸುತ್ತಲಿದಿರಿಪ |
ಖ್ಯಾತರಿನ್ನಾರೆನುತಲೀಕ್ಷಿಸುತಿರಲು ಚರ ನೋಡಿ ||
ಭೂತಳಾಧಿಪಗರುಹೆ ಪ್ರಳಯದ |
ಭೂತಪತಿಯೆಂದೆನಲು ಕನಲು |
ತ್ತಾತತೂಕ್ಷಣ ಕಾರ್ತಿಕೇಯನು ಬಂದು ತಡದೆಂದ || ೧ || || 70 ||

**ಶಂಕರಾಭರಣ - ಮಟ್ಟೆ**
ನಿಲ್ಲು ನಿಲ್ಲು ಖುಲ್ಲ ದನುಜ |
ಮಲ್ಲತನದಿ ನಮ್ಮ ತನುಜ |
ನಲ್ಲಿ ಸೆಣಸಿ ಜೈಸಿ ಗರ್ವ | ದಲ್ಲಿ ನಲಿವೆಯಾ || ೧ ||

ಕಾರ್ತಿಕೇಯ ನೃಪನೊ ನೀನು |
ಪುತ್ರ ಸೋತುದರಿತು ನಮ್ಮ |
ಸತ್ವಕಿದಿರು ಬಂದುದೇಕೆ | ಪುತ್ರಿಯಳ ಕೊಡು || ೨ ||

ಧೂರ್ತ ದನುಜ ನಿನಗೆ ನಮ್ಮ |
ಪುತ್ರಿಯನ್ನು ಕೊಡುವುದುಂಟೆ |
ಮತ್ತನಾಗಿ ನುಡಿಯೆ ತಲೆಯ | ಕತ್ತರಿಸುವೆನು || ೩ ||

ಅರಿಯದೆನ್ನ ನುಡಿವೆ ನೀನು |
ಮೆರೆವ ವಿಂಧ್ಯಾಪುರಿಯನಾಳ್ವ |
ಧುರಸಮರ್ಥ ದೀರ್ಘನೇತ್ರ | ನಿರುವೆ ತಿಳಿಯೆಯಾ || ೪ ||

ದುರುಳ ದೀರ್ಘನೇತ್ರ ನಿನ್ನ |
ಪರಿಚಯದಲಿ ಫಲವದೇನು |
ಮರುಳೆ ನಿನಗೆ ನಮ್ಮ ಸುತೆಯು | ದೊರೆಯಳೆಂದಿಗು || ೫ ||

ಛಲವ ತೋರೆ ಕ್ಷಣದಿ ನಿನ್ನ |
ತಲೆಯ ಕಡಿದು ಪುತ್ರಿಯನ್ನು |
ತಳುವದೊಯ್ವೆ ಲಕ್ಷ್ಯವೇನೊ | ಹುಲು ನರಾಧಮ || ೬ ||

ಸಾಕು ಗಳಹಬೇಡ ಖಳನೆ |
ಲೋಕ ಲೋಕ ಬಾಧಿಸುವ ವಿ |
ವೇಕಹೀನ ನಿನ್ನ ಪ್ರಾಣ | ನೂಕಿ ಕಳವೆನು || ೭ ||

ಎನ್ನ ಕೇಳ್ವರ್ಯಾರು ನೀ ಮು |
ಕ್ಕಣ್ಣನಂಜುತಿರುವನೆನಗೆ |
ಕುನ್ನಿ ಕುರಿಯು ಸಿಂಹದಿದಿರು | ಎನ್ನಲುಳಿವುದೆ || ೮ ||

ಆದರೀಕ್ಷಿಸೆನುತಲಾ ಧ |
ರಾಧಿಪತಿಯು ಬಾಣವೊಂದ |
ಕ್ರೋಧದಿಂದ ಬಿಡಲು ತರಿದ | ನಾ ದುರಾತ್ಮನು || ೯ ||

ಬಳಿಕ ಭೂಪ ವಹ್ನಿಶರವ |
ಮುಳಿದು ಬಿಡಲು ವರುಣ ಖಗದಿ |
ಖಳನು ತರಿದು ನೃಪನ ಬಿಲ್ಲ | ಸೆಳೆದುಕೊಂಡನು || ೧೦ || || 80 ||

**ಭಾಮಿನಿ**
ಬಿಲು ಸೆಳೆಯೆ ಗದೆ ಖಡ್ಗ ತೋಮರ |
ಗಳಲಿ ಹಳಚಲಿಕೆಲ್ಲವನು ಖಳ |
ಗೆಲಿದು ಭೂಪಾಲಕನ ಕೈಸೆರೆ ಪಿಡಿಯುತಿರಲಿತ್ತ ||
ನಲವಿನಿಂ ವಾಲ್ಮೀಕಿ ಮುನಿಯಿಂ |
ನಿಳೆಯಕೈದಲು ನೇಮವನುಗೊಂ |
ಡುಲಿದು ಬರುತಿರೆ ರಾಜಹಂಸನು ಮುನಿಪ ನಾರದನು || ೧ || || 81 ||

**ಕೇದಾರಗೌಳ - ಅಷ್ಟ**
ಹರಿ ಹರಿ ಯೆನ್ನುತ್ತ | ಬರುತಿರಲಿದಿರೊಳು |
ಧರಣಿಪ ನಂದನನು ||
ಹರುಷದಿ ಮುನಿಪನ | ಚರಣಕೆ ವಂದಿಸೆ |
ಹರಸುತ್ತಲವನೆಂದನು || ೧ ||

ಮಗನೆ ಕೇಳ್ ನಿನ್ನಯ | ಬಗೆಯೆಲ್ಲ ತಿಳಿದಿರ್ಪೆ |
ನಿಗೊ ಪೇಳ್ವೆನೊಂದು ಕಾರ್ಯ ||
ಜಗಳದಿ ಗಾಂಧಾರ | ಜಗದಧಿಪನ ಕೂಡೆ |
ಬಗೆ ಬಗೆ ತೋರು ಶೌರ್ಯ || ೨ ||

ಖಳ ದೀರ್ಘನೇತ್ರನು | ಗೆಲಿದು ಸೆರೆಯೊಳಿಟ್ಟು |
ನಲಿಯುತಾತನ ಪುತ್ರಿಯ ||
ಸೆಳೆದೊಯ್ವ ಯೋಚನೆ | ಯೊಳಗಿರ್ಪ ತಡೆದರೆ |
ಕೆಲಸ ಹಾಳಾಯಿತಯ್ಯ || ೩ || || 84 ||

**ಭಾಮಿನಿ**
ತರಳೆಯೆನಲವಳ್ಕಾಮನರಗಿಣಿ |
ಸರಿ ಜೊತೆಯು ನಿನಗದರಿನಿಂ ನೀ |
ತೆರಳಿ ಖೂಳನ ಕೊಂದು ಸುದತಿಯ ವರಿಸೆನುತ್ತುಸುರಿ ||
ಸುರಮುನಿಪ ಹರಿಯೆನುತಲೈದಲು |
ಧರಣಿಪಾಲಕುಮಾರನಹುದೆಂ |
ದುರುತರಾನಂದದಲಿ ಗಾಂಧಾರಕ್ಕೆ ಗಮಿಸಿದನು || ೧ || || 85 ||

**ಕಂದ ಪದ್ಯ**
ಇಂತವ ಬರುತಿರಲು ಭೂ |
ಕಾಂತನನುಂ ಸೆರೆಯೊಳಿಟ್ಟು ದೀರ್ಘಾಂಬಕನುಂ ||
ಕಾಂತಾಮಣಿಯಂ ಕಾಣ |
ಲ್ಕಂತಃಪುರದೆಡೆಗೆ ಸಾಗಿ ಬೆರಗಾಂತೆಂದಂ || ೧ || || 86 ||

**ಬೇಗಡೆ - ಏಕ**
ಅರರೆ ನಾರದ | ರರುಹಿದುದು ಸತ್ಯ | ಇವಳಂಥ ಸೊಬಗಿನ |
ತರುಣಿಯನು ಕಂ | ಡರಿಯೆನೇನ್ ಸ್ತುತ್ಯ ||
ಸರಸಿಜಾಕ್ಷಿಯು | ಸರಿಯೆ ಗಮನವ |
ಪರಿಕಿಸಲು ಮದ | ಕರಿಯು ನಾಚುತ |
ಮರೆಯ ಸಾರ್ವುದು | ಕಿರುನಗೆಯು ಮಿರ |
ಮಿರನೆ ಮಿರುಗಲು | ಕರುಬುವನು ಶಶಿ || ೧ ||

ನುಡಿಯೆ ಗಿಳಿ ಬಾ | ಯ್ಬಿಡಲು ನಾಚುವುದೂ | ಎಂಬೋಲು ವಾಣಿಯ |
ಬೆಡಗು ಮೆರೆಯದೆ | ಬಿಡದು ಸುದತಿಯದೂ ||
ಹಿಡಿಯೊಳಡಗುವ | ನಡುವಿದಾವೊಲೆ |
ಕೊಡಗಳೆರಡನು | ಪಡೆದು ಮೆರೆವೆದೆ |
ಕೊಡುವ ಭಾರವ | ನೊಡನೆ ತಾಳುವ |
ದೃಢತೆಯಿದು ನವ | ನಡತೆಯೆನಲಿದೆ || ೨ ||

ತುಂಬಿಗುರುಳೆಯ | ಕಂಬುಕಂಠಿಣಿಯಾ | ಕಮನೀಯ ಗಾತ್ರೆಯ |
ತುಂಬು ಜೌವನ | ದಿಂಬ ನವಮಣಿಯಾ ||
ಕಾಂಬ ಭಾಗ್ಯ | ಕ್ಕೆಂಬುದೇನಿ |
ನ್ನಂಬುಜಾಸ್ತ್ರನು | ಬೆಂಬಿಡದೆ ಕೂ |
ರಂಬನೆಸೆವನು | ಚುಂಬಿಸುತ ಮುಖ |
ಬಿಂಬವನು ಸುಖಿಗೊಂಬೆ ನಿಶ್ಚಯ || ೩ || || 89 ||

**ಕಂದ ಪದ್ಯ**

ಎಂದಾ ಖಳ ತನ್ನೊಳು ಮನ |
ಬಂದಂದದಿ ಯೋಚಿಸುತ್ತ ಭ್ರುಮೆಗೊಂಡಾಗಳ್ ||
ಸುಂದರಿಯಂ ಕರೆದತ್ತಾ |
ನಂದದೊಳವಳೊಡನೆ ಪೇಳ್ದನೀ ತೆರದಿಂದಂ || ೧ || || 90 ||

**ಮಧುಮಾಧವಿ - ಏಕ**

ನಳಿನನಯನೆ ಕೇಳೆ | ನಳಿದೋಳ ಬಾಲೆ |
ನಲಿದೇಳೆ ಕೋಮಲೆ | ಚೆಲುವಿನ ಮಾಲೇ |
ಬಳಿ ಬಂದೆನಿದೊ ಲೀಲೆ | ಮೊಳಗಲಿ ಶೀಲೇ |
ಇಳೆಗೆ ನೀನೋರ್ವಳೆ | ಕಳೆ ಶಶಿಫಾಲೇ || ೧ ||

ಯುದ್ಧದ ಕಲೆಯನು | ಸಿದ್ಧಿಸಿದವನೂ |
ಗೆದ್ದೀಗೆಲ್ಲವರಾನು | ಒದ್ದು ಬಂದವನೂ |
ಎದ್ದು ನಿಂದೆನ್ನನೂ | ಮುದ್ದಿಸು ನೀನೂ |
ಸ್ಪರ್ಧಿಸೆ ಸ್ಮರನನು | ಸಿದ್ಧವಾಗಿಹೆನೂ || ೨ ||

ವಿಂಧ್ಯಾದ್ರಿಪುರವದು | ಚಂದದೊಳಿಹುದೂ |
ಸುಂದರಿ ನಿನ್ನದು | ಹೊಂದಿಕೆಯಹುದೂ |
ಮುಂದಲ್ಲಿಗೇ ಒಯ್ಯು | ನಿಂದಿರಬಹುದೂ |
ಕಂದರ್ಪನನೆ ಗೆದ್ದು | ಬಂಧಿಸಬಹುದೂ || ೩ || || 93 ||

**ಆರ್ಯ ಸವಾಯ್ - ಏಕ**

ಎನಲದ ಕೇಳುತ | ಮನದೊಳು ಬೆಚ್ಚುತ |
ವನಿತೆಯು ತನ್ನೊಳೆ ಕಳವಳಿಸಿ ||
ಕ್ಷಣವಾಲೋಚಿಸಿ | ದನುಜನ ದೂಷಿಸಿ |
ಮುನಿದೆಂದಳು ಬಲು ತಳಮಳಿಸಿ || ೧ || || 94 ||

**ಕೇದಾರಗೌಳ - ಅಷ್ಟ**

ದುರುಳ ರಕ್ಕಸ ನೀನು | ಮರುಳಾಗಿ ಯೇನೇನೋ |
ಹರಟದಿರೆನ್ನೊಡನೆ ||
ಥರವಲ್ಲವದು ನಿನ್ನ | ಪುರದತ್ತ ಸರಿ ಮುನ್ನ |
ಪರಿವಾರ ಸಹಿತೊಡನೆ || ೧ ||

ಯಾಮಿನೀಚರ ಹೀಗೆ | ಕಾಮಾಂಧನಾಗಿ ನೀ |
ಕಾಮಿನಿಯನು ಕೆಣಕಿ ||
ಸಾಮರ್ಥ್ಯ ತೋರ್ಪುದು | ಸಾಮಾನ್ಯತನವಿದು |
ಕೈಮಾಡದಿರು ದುಡುಕಿ || ೨ ||

ಪರನಾರಿಯೆನಲು ಸೋ | ದರಿಗೆ ಸಮಾನವೆಂ |
ದರಿಯದಾದೆಯ ಮೂರ್ಖನೇ ||
ಬರಿದೆ ನಿನ್ನಯ ಭಾಗ್ಯ | ಸಿರಿಯನೆಲ್ಲವ ಬಿಟ್ಟು |
ನರಕ ಸೇರ್ವೆಯ ಸುಮ್ಮನೆ || ೩ || || 97 ||

**ಕೇದಾರಗೌಳ - ಝಂಪೆ**
ಸಾಕು ಸಾಕೆಲೆ ಕಾಮಿನಿ | ಇಂತು ನೀ |
ನೇಕೆ ನುಡಿಯುವೆ ಭಾಮಿನಿ ||
ನೀ ಕಾಣೆ ಚೆಲುವೆಯೆಂದು | ಮನಮಾಡೆ |
ಸ್ವೀಕರಿಸದಿಹರೆ ಬಂದು || ೧ ||

ಸ್ವೀಕರಿಸಲಾರೆ ನಿನ್ನ | ಬಂದೆ ನೀ |
ಭೀಕರಿಸದೈದು ಮುನ್ನ ||
ಪೋಕತನವೆನ್ನೊಳೊಂದು | ಸಲ್ಲದಿ |
ನ್ನೇಕೆ ಬಾಧಿಸುವೆ ನಿಂದು || ೨ ||

ಛಲವೇನೆ ನಿನ್ನ ಪಿತನಾ | ಸೆರೆಪಿಡಿದ |
ಬಲವಂತನೊಡನೆ ಜತನ ||
ಫಲಿಸದಿನ್ನೇನು ವರಿಸು | ಎನ್ನ ಸ್ಮರ |
ನಲಗಿನುರಿಯನ್ನು ಸರಿಸು || ೩ ||

ಪಿತನ ಯುದ್ಧದಿ ಸೋಲಿಸಿ | ಸೆರೆಪಿಡಿದ |
ಪಥವೆ ತಪ್ಪದು ಲಾಲಿಸಿ ||
ಹಿತದಿಂದಲವನ ಬಿಟ್ಟು | ತೆರಳೆ ಸ |
ದ್ಗತಿ ನಿನಗೆ ಸೌಖ್ಯವೊಟ್ಟು || ೪ ||

ತೆರಳುವೆನೆ ನಿನ್ನ ತೊರೆದು | ಬರದೆ ನೀ |
ನಿರುವೆಯೆಂತೆನ್ನ ತೊರೆದು ||
ದುರುಳ ಪಿಡಿದೊಯ್ವೆನೆನುತ | ಮುಂದ್ವರಿಯೆ |
ತರುಣಿ ಮರುಗಲು ಕೂಗುತ || ೫ || || 102 ||

**ಭಾಮಿನಿ**
ಪಾರ್ಥ ಕೇಳನಿತರೊಳಗಬಲೆಯ |
ಸತ್ಯವೇ ಸಾಕಾರರೂಪವ |
ನೆತ್ತಿತೆನಲಾ ರಾಜಹಂಸನು ಪುರವನೊಳ ಪೊಕ್ಕು ||
ಎತ್ತ ಪೋದನು ದುರುಳನೆಂದರ |
ಸುತ್ತ ಬರೆ ಬಾಲಕಿಯ ಮೊರೆ ಕೇ |
ಳ್ದೆತ್ತ ಧಾವಿಸಿ ಖಳನ ತಡೆದಿಂತೆಂದ ಶೌರ್ಯದಲಿ || ೧ || || 103 ||

**ಭೈರವಿ - ಏಕ**
ಸರಿ ದೂರಕೆ ಖಳ ದೈತ್ಯ | ಈ |
ತರಳೆಯ ಮೇಲೀ ಕೃತ್ಯ ||
ವಿರಚಿಸ ಬಂದೆಯ ಧೂರ್ತ | ಯಮ |
ನರಮನೆ ಸೇರುವಿ ವ್ಯರ್ಥ || ೧ ||

ಆರೆಲೊ ನೀ ಹುಲು ನರನೆ | ಈ |
ನಾರಿಯ ನಾನೊಯ್ವವನೆ ||
ಸಾರತ್ತತ್ತಲು ನಿನ್ನ | ನಿಲೆ |
ಹಾರಿಪೆ ರುಂಡವ ಮುನ್ನ || ೨ ||

ಮಾಳವಪುರದರಗುವರ | ನಾ |
ಪೇಳೆನು ನಿನ್ನೊಳು ವಿವರ ||
ಪೇಳಿದರೇನ್ಫಲ ಕೊಂದು | ಯಮ |
ನಾಲಯಕಟ್ಟುವೆನಿಂದು || ೩ ||

ಗಾಂಧಾರೇಶನ ಗೆಲಿದ | ಎ |
ನ್ನಂದವನರಿಯದೆ ಮುಳಿದ ||
ಮಂದಮತಿಯೆ ನೀನೆನಗೆ | ಜೊತೆ |
ಯೆಂದೆಣಿಸದೆ ನಡೆ ಮನೆಗೆ || ೪ ||

ಸೆರೆಯಿಂದಾ ನೃಪತಿಯನು | ಹೊರ |
ತರುವೆನು ಕ್ಷಣದೊಳಗಾನು ||
ಕರದೊಳಗಿಹ ಶಕ್ತಿಯನು | ನೀ |
ಪರಿಕಿಸಿ ಯೋಚಿಪದಿನ್ನು || ೫ ||

ಪರಿಕಿಸಲೇನಿದೆ ಯೆನಗೆ | ಪುರ |
ಹರನನೆ ಲೆಕ್ಕಿಸದವಗೆ ||
ಸುರ ನರ ಕಿನ್ನರರೊಳಗೆ | ಯಾ |
ರಿರುವರು ಸ್ಪರ್ಧಿಸೆ ಬಿನುಗೆ || ೬ ||

ನಾನಿಹೆ ಸ್ಪರ್ಧಿಸಲೆನ್ನ | ಸು |
ತ್ರಾಣವ ನೋಡಿದೊ ಮುನ್ನ ||
ಬಾಣವಿದೋ ಯೆನುತೆಸೆಯೆ | ಖಳ |
ಕಾಣುತ ಮುರಿದದ ನಲಿಯೆ || ೭ ||

ಕನಲುತ್ತಲಿ ನೃಪತರಳ | ಆ |
ದನುಜ ದುರಾತ್ಮನ ಕೊರಳ ||
ಘನ ಚಂದ್ರಾಯುಧದಿಂದ | ತರಿ |
ದನು ಪೊಗಳಲು ಸುರವೃಂದ || ೮ || || 111 ||

**ಶಂಕರಾಭರಣ - ತ್ರಿವುಡೆ**
ಕಾಣುತದ ಕಂಜಾಕ್ಷಿ ತಾ ಸು |
ಮ್ಮಾನದಿಂ ತುಸು ನಾಚುತಾ |
ಮಾನವೇಂದ್ರ ಕುಮಾರಗೆರಗಿದ | ಳಾನಿತಂಬೆ || ೧ ||

ಧನ್ಯಳಾದೆನು ಸ್ವಾಮಿ ನಿಮ್ಮ ಮ |
ಹೋನ್ನತದ ಸಾಮರ್ಥ್ಯದೀ |
ಕುನ್ನಿ ಖಳನಳಿದೀಗ ಮನಕೆ ಪ್ರ | ಸನ್ನವಾಯ್ತು || ೨ ||

ದುರುಳ ದಾನವನೆನ್ನ ಪಿತನನು |
ಹೊರಗದೆಲ್ಲೋ ಸೆರೆಯೊಳೂ |
ಇರಿಸಿಹನು ನೀ ವೊಡನೆ ಬಿಡಿಸುತ | ಪೊರೆಯಬೇಕೂ || ೩ || || 114 ||

**ಭಾಮಿನಿ**
ಎಂದು ಪ್ರಾರ್ಥಿಸಲಾಗಲಾ ನೃಪ |
ನಂದನನು ಹೊರಗೈದಿ ರಕ್ಕಸ |
ನಿಂದ ಬಂಧಿತನಾಗಿ ನರಳುವ ಭೂಪನನು ಬಿಡಿಸೇ ||
ಹಿಂದಕೋಡಲು ಬೆದರುತಾ ಖಳ |
ಸಂದಣಿಯು ಗಾಂಧಾರ ಭೂಮಿಪ |
ಮುಂದೆಸೆವ ನೃಪನಂದನನನೀಕ್ಷಿಸುತಲಿಂತೆಂದಾ || ೧ || || 115 ||

**ಭೈರವಿ - ಝಂಪೆ**
ಯಾರು ಪುಣ್ಯಾತ್ಮ ನೀ | ನೀ ರೀತಿಯಿಂದೆನ್ನ |
ಘೋರ ಬಂಧನದಿಂದ | ಪಾರು ಮಾಡಿದವ || ೧ ||

ಪುರವೆಲ್ಲಿ ಪಿತನಾರು | ಸರಿಹೊತ್ತಿನೊಳಗಿತ್ತ |
ಸರಿದ ಬಗೆ ಪೊಸತೆಲ್ಲ | ದುರುಳನೇನಾದ || ೨ ||

ಕೊಂದೆಯೋ ಸೋಲಿಸುತ | ಹಿಂದಕೋಡಿಸಿದೆಯೋ |
ಯೆಂದೆಲ್ಲ ವಿವರ ಪೇಳೆಂದೆನಲಿಕೆಂದಾ || ೩ ||

ನಾರದರನುಜ್ಞೆಯಲಿ | ಸಾರಿಬರಲಿತ್ತ ಖಳ |
ನಾರಿಯನು ದುಡುಕುತಿರೆ | ಹಾರಿಸಿದೆ ರುಂಡಾ || ೪ ||

ಮಾಳವದ ಭೂಪಾಲ | ಬಾಲಕನು ನಾನೆಂದು |
ಪೇಳಲೆಲ್ಲವ ನೃಪನು | ಕೇಳಿ ಹರುಷದಲೀ || ೫ ||

ಕರೆದೊಯ್ಯುತರಮನೆಗೆ | ಸುರುಚಿರಾಸನವಿತ್ತು |
ಹರುಷಮಿಗೆ ಮನ್ನಿಸಿದ | ಕರೆಸುತೆಲ್ಲವರ || ೬ || || 121 ||

**ಭಾಮಿನಿ**
ಪಾರ್ಥ
ಕೇಳೈ ಬಳಿಕ ತನ್ನಯ |
ಪುತ್ರಿಯಹ ಕಂಜಾಕ್ಷಿಗೀತನೆ |
ಉತ್ತಮೋತ್ತಮ ವರನೆನುತ್ತಲಿ ಮನದಿ ನಿಶ್ಚೈಸೀ ||
ಕಾರ್ತಿಕೇಯ ನೃಪಾಲನವ ಸುಮು |
ಹೂರ್ತದಲಿ ವೈವಾಹ ವಿಧಿಯಲಿ |
ಯಿತ್ತನಣುಗಿಯ ರಾಜಹಂಸಗೆ ಬಹಳ ಸಂಭ್ರಮದೀ || ೧ || || 122 ||

**ವಾರ್ಧಕ**
ಇಂತಾಗೆ ಪರಿಣಯಂ ರಾಜಹಂಸಂ ಬಳಿಕ |
ಕಾಂತೆಯೊಡನಲ್ಲಿಯೇ ಸುಖಿಸುತಿರೆ ಮುಂಗಥೆಯ |
ನೆಂತೊರೆವೆನೊಂದು ದಿನ ನೃಪತನಯ ಕಂಜಾಕ್ಷನರಮನೆಯ ಮಾಳಿಗೆಯಲೀ ||
ಸಂತಸದೆ ರಾತ್ರಿಯೊಳ್ ವೀಣೆಯಂ ನುಡಿಸುತ |
ತ್ಯಂತ ಸುಸ್ವರದಿಂದ ಪಾಡುತಿರಲಂಬರದಿ |
ನಿಂತಾಲಿಸುತ ರಂಭೆ ಜೊತೆಯೊಳಿದ್ದೂರ್ವಶಿಯ ಕರೆದಾಗಲಿಂತೆಂದಳೂ || ೧ || || 123 ||

**ಶಂಕರಾಭರಣ - ಏಕ**
ಲಾಲಿಸಿದೆಯ ಸುಸ್ವರವನು |
ತಾಳಬದ್ಧವಾಗಿಯದನು |
ಲೀಲೆಯಿಂದ ಪಾಡುತಿಹನು | ಪೇಳಲೇನನೂ || ೧ ||

ಮಾನವರೊಳಗಿಂಥ ಮಧುರ |
ಗಾನಪಟುಗಳಿಹರೆ ಚದುರ |
ನೇನು ನುಡಿಸುತಿರುವನಿದಂ | ನಾನೀಕೋ ಸ್ವರ || ೨ ||

ನಿನ್ನ ಮನಕೆ ಮೆಚ್ಚಿತೇನೆ |
ಪುಣ್ಯವಂತನವನು ಜಾಣೆ |
ಯೆನ್ನ ಚಿತ್ತ ಸೋತುದಿನ್ನೇ | ನನ್ನು ಬೇಗನೇ || ೩ ||

ಏನೆ ರಂಭೆ ನರನನಿಂತು |
ನೀನು ಹೊಗಳುತಿರುವಿ ನಿಂತು |
ಮಾನಸಕ್ಕೆ ಬಂತೆ ಭ್ರಾಂತು | ಗಾನ ಕೇಳ್ದಂತೂ || ೪ ||

ಎನಗೆ ಭ್ರಾಂತಿಯಲ್ಲ ಗಾನ |
ವನಿತದಿಹುದು ನೀನು ಮಾನ |
ವನದದೆನುತಲಿನಿತು ಕೇಣ | ವೆಣಿಸಲೇನ್ಫಲ || ೫ || || 128 ||

**ಭಾಮಿನಿ**
ನುಡಿಗೆ ಕೋಪದೊಳೂರ್ವಶಿಯು ತ |
ನ್ನೊಡದ ರೆಕ್ಕೆಯ ವಿಷದ ಬಿಂದನು |
ಕೆಡಹಿ ಕಂಜಾಕ್ಷನನು ಮಡುಹಿಸಿ ಸರಿಯೆ ಮುಂದಾಗ ||
ಪೊಡವಿಪತಿ ಕೇಳ್ದದನು ಚಿಂತಾ |
ಮಡುವಿನೊಳು ಮುಳುಗುತ್ತ ಹೊರಳ |
ಲ್ಕೊಡನೆ ತಿಳಿದಾ ರಾಜಹಂಸನು ಧೈರ್ಯವಾಂತೆಂದ || ೧ || || 129 ||

**ಸೌರಾಷ್ಟ್ರ - ತ್ರಿವುಡೆ**
ಮಾವ ನೀವಿದಕಾಗಿ ಚಿಂತಿಸ |
ಲಾವ ಫಲವಿದೆ ಜಗದಿ ಮನುಜಗೆ |
ಸಾವು ಹುಟ್ಟುಗಳೆಂಬುದಿಪ್ಪದೆ | ಕಾವರ್ಯಾರು || ೧ ||

ತಿಳಿದವರು ಇದಕಾಗಿ ಚಿಂತಿಸೆ |
ಫಲವು ಬಾರದೆನುತ್ತ ಧೈರ್ಯವ |
ತಳೆಯುವರು ನೀವರಿತರಿತು ಹೀ | ಗಳಲಲೇಕೆ || ೨ ||

ಅಳಿಯ ನೀನಾಡಿದುದು ಸಹಜವೆ |
ಅಳಿದ ದೇಹವ ಪ್ರೇತರಾಕ್ಷಸ |
ಬಳಗಕೀಯುವದೆಣಿಸೆ ಮತ್ತೂ | ಕಳವಳಿಸುವೆ || ೩ ||

ಕಟ್ಟಳೆಯು ಹಾಗಿಹುದು ನಮ್ಮೀ |
ಪಟ್ಟಣದಿ ಸತ್ತವರ ದೇಹವ |
ಸುಟ್ಟು ಬಿಡದಾ ಭೂತ ರಾಜಗೆ | ಕೊಟ್ಟು ಮಣಿದು || ೪ ||

ನಡೆವರದರನು ನೆನೆಸಿ ನೆನೆಸಿಯೆ |
ಮಿಡುಕಿ ದುಃಖಿಸುತಿಹೆನು ಹೊರತಾ |
ರಡಸುವದ ತಪ್ಪಿಪರು ಎನಲವ | ನೊಡನೆ ಪೇಳ್ದ || ೫ || || 134 ||

**ಭೈರವಿ - ಅಷ್ಟ**
ಮಾವ ನೀವಂಜದಿರಿ | ಭೂತಾಧಿಪ |
ಗೀವುದ ತಪ್ಪಿಸಿರಿ ||
ಕಾವೆನು ಬಪ್ಪುದ | ಕೀ ವಿಧ ಕಟ್ಟಳೆ |
ಯಾವುದು ಸರಿಯಲ್ಲವು || ೧ ||

ಭೌತಿಕ ದೇಹವನು | ದಹಿಸುವಂಥ |
ರೀತಿಯಿರಲಿಕದನು ||
ಈ ತೆರ ತಪ್ಪಿಸು | ವಾತನೆಂತಹ ದೊಡ್ಡ |
ಭೇತಾಳ ನೋಡುವೆನು || ೨ ||

ರುದ್ರಭೂಮಿಗೆ ಹೆಣವ | ಕೊಂಡೊಯ್ದಲ್ಲಿ |
ಸಿದ್ಧವಾಗಿಯೆ ಕಾಯುವ ||
ಗೆದ್ದೆನ್ನನೊಯ್ಯಲಿ | ಸುದ್ದಿ ಯಾಕವರನು |
ಯುದ್ಧದಿ ಗೆಲ್ಲುವೆನು || ೩ || || 137 ||

**ಭಾಮಿನಿ**
ಎಂದೊಡಂಬಡಿಸುತ್ತ ಬಳಿಕವ |
ನಂದು ಹೆಣವಂ ರುದ್ರಭೂಮಿಯ |
ಮುಂದೆ ಹೊರಿಸುತಲಿರಿಸಿ ಚಂದ್ರಾಯುಧವ ತಾ ಧರಿಸಿ ||
ಹಿಂದುಮುಂದಾರ್ಬರುವರೆನುತಲಿ |
ನಿಂದು ಕಾಯುತ್ತಿರಲು ಕಂಡದ |
ರಂದವನು ಭೇತಾಳಗರುಹಿದರೋಡಿ ಭೂತಗಳು || ೧ || || 138 ||

**ಮುಖಾರಿ - ಏಕ**
ಭೇತಾಳ ರಾಜ ಕೇಳಯ್ಯಾ | ನಾವೆಂಬ ನುಡಿಯಾ |
ಭೇತಾಳ ರಾಜ ಕೇಳಯ್ಯಾ ||
ಭೂತಳದೊಳು ನರ | ಗೀ ತೆರ ಧೈರ್ಯವೆ |
ಕೌತುಕವಿದು ಹಾ | ಭೌತಿಕ ದೇಹವ |
ನಾತನು ಕಾಯುವ | ರೀತಿಯೆ ಪೊಸತಿದು |
ಭೀತಿಗೊಳಿಪನವ | ನೇತರ ಸತ್ವನೊ || ೧ ||

ಕಾರ್ತಿಕೇಯನ ಸುತನೂ | ಸತ್ತಿರಲದನೂ |
ವ್ಯರ್ಥದೊಳವ ಕಾಯುತಿಹನೂ ||
ಇತ್ತಣ ನಮ್ಮ ಮ | ಹತ್ತರ ಶಕ್ತಿಯ |
ಗೊತ್ತರಿಯದೆ ನರ | ವ್ಯರ್ಥದಿ ಕಿಡಿ ಸೂ |
ಸುತ್ತಲಿ ಸುತ್ತಲು | ಸುತ್ತುವನವನನು |
ತುತ್ತಾಗಿಸಿ ಹೆಣ | ವೆತ್ತಲು ಬೇಕೈ || ಭೇತಾಳ || ೨ || || 140 ||

**ಸೌರಾಷ್ಟ್ರ - ತ್ರಿವುಡೆ**
ಕೇಳುತಾ ನುಡಿ ಗರ್ಜಿಸುತ ಭೇ |
ತಾಳ ತನ್ನಯ ಭೂತ ರಕ್ಕಸ |
ಜಾಲವನು ಕರದೆಂದ ರೋಷ ಕ | ರಾಳನಾಗಿ || ೧ ||

ಬಡ ಮನುಜಗೀ ತೆರದ ಗರ್ವವೆ |
ನಡೆದು ಬಂದಿಹ ಪದ್ಧತಿಯನವ |
ಬಿಡಿಸಲೆಳಸಿದಡಲ್ಲಿ ಸಹಿಸೆನು | ದೃಢದೊಳಿದನು || ೨ ||

ಅದರಿನಿಂ ನೀವೀಗ ಸಾಗುತ |
ಲೊದೆದು ಸದೆದಾ ಮನುಜನನು ಯಮ |
ಸದನಕಟ್ಟುತ ಹೆಣವ ತಂದೆನ | ಗೊದಗಿಸುವುದು || ೩ || || 143 ||

**ಭೈರವಿ - ಅಷ್ಟ**
ಭೂತರಕ್ಕಸರೆಂದರು | ವಂದಿಸಿ ಬಲು |
ಖಾತಿಯೊಳ್ನಿಂದಿದಿರು ||
ಭೇತಾಳಪತಿ ಕೇಳಿ | ರೇತಕೆ ಯೋಚನೆ |
ಘಾತಿಸುವೆವು ನರನ || ೧ ||

ಹೆಣಗಲು ಬಿಡೆವವನ | ಕೊಂದಿಕ್ಕುತ್ತ |
ಹೆಣವನು ತಹೆವು ಮುನ್ನ ||
ಬಣಗು ನರಾಧಮ | ಗಿನಿತಾಯ್ತೆ ಗರ್ವವು |
ಗಣನೆಯಿಲ್ಲವು ನಮಗೆ || ೨ ||

ಎಂದು ನೇಮವನುಗೊಂಡು | ಮಸಣ ಭೂಮಿ |
ಗಂದು ರಕ್ಕಸರ ದಂಡು ||
ಬಂದು ನೃಪಾತ್ಮಜ | ಗೆಂದರು ಘರ್ಜನೆ |
ಯಿಂದಲಿ ನಡುಗಿಸುತ || ೩ || || 146 ||

**ಶಂಕರಾಭರಣ - ಮಟ್ಟೆ**
ಬಣಗು ಮನುಜ ನಮಗೆ ಸಲುವ |
ಹೆಣವ ಕೊಡದೆ ಕಾಯ್ವುದೇಕೆ |
ಕ್ಷಣದೊಳಿತ್ತು ಶರಣು ಹೊಕ್ಕು | ಮಣಿದು ಬದುಕಿಕೊ || ೧ ||

ಮಾತು ಸಾಕು ಹೆಣವ ಕೊಡೆನು |
ಭೀತಿಗೊಳಿಸಲಂಜಲಾರೆ |
ಸ್ವಾತಿಶಯದಿ ಸಾಗಲೊಳ್ಳಿ | ತೇತಕೀ ಹಟ || ೨ ||

ನಮ್ಮ ತುತ್ತ ಕಸಿಯಲೆಳಸ |
ಲೊಮ್ಮೆಗೂ ಪಿಂಜರಿಯೆವೀಗ |
ಹಮ್ಮದೋರೆ ನಿನ್ನ ಕೊಂದು | ಧಿಮ್ಮನೊಯ್ವೆವು || ೩ ||

ಮರುಳು ಗಣಗಳರಿಯದೆನ್ನ |
ಪರಿಯನೊದರಿ ಸಾಯಲೇಕೆ |
ತೆರಳಿರತ್ತ ಮುನಿಯೆ ಮೂರು | ಧರೆಯ ನುಂಗುವೆ || ೪ ||

ಅಷ್ಟುಪಂಥವಾದರೀಗ |
ಕುಟ್ಟಿ ಕಳೆವೆವೆನುತಲಾಗ |
ಲೊಟ್ಟು ಮುಸುಕಲವನ ಬೇಗ | ಬಿಟ್ಟ ರವಿಶರ || ೫ || || 151 ||

**ಭಾಮಿನಿ**
ಆನಲಾರದೆ ಭಾಸ್ಕರಾಸ್ತ್ರವ |
ನಾ ನಿಶಾಚರರೈದಿ ಭಯಗೊಂ |
ಡಾ ನರನೊಳರಿದೆಂದು ಭೇತಾಳನೊಳು ದೂರಲ್ಕೆ ||
ಏನಿದೇನೆಂದೆನುತ ಖತಿಯಿಂ |
ತಾನೆ ಪೊರಟೈತಂದು ನೃಪತಿಯ |
ಸೂನುವನು ನೋಡುತ್ತ ಕೋಪದೊಳೆಂದ ಭೇತಾಳ || ೧ || || 152 ||

**ಕಾಂಭೋದಿ - ಝಂಪೆ**
ಎಲವೊ ಮನುಜಾಧಮನೆ | ಬಲು ಕಾಲದಿಂ ನಮಗೆ |
ಸಲುವ ಪದ್ಧತಿಯ ತಪ್ಪಿಸಲು ||
ಸುಲಭವೇ ನಿನಗೆ ನೀ | ನಿಲಬಹುದೆ ಯೀ ಬಗೆಗೆ |
ಛಲದಿಂದ ತಲೆಯನೊಪ್ಪಿಸಲು || ೧ ||

ಭೂತಾಧಿಪನೆ ನೀನು | ಮಾತಾಡಬಹುದೆ ಈ |
ರೀತಿಯಲಿ ನ್ಯಾಯವೇನಿಹುದು ||
ಭೌತಿಕ ಕಳೇವರವ | ವಾತಾಪ್ತನಲಿ ದಹಿಪು |
ದೇ ತತ್ವವದ ಮಾಡಲಹುದು || ೨ ||

ಹಿಂದಿನಿಂದಲೆ ನಡೆದು | ಬಂದುದೇ ಸರಿ ಹೊರತು |
ಇಂದು ಹೊಸ ಪದ್ಧತಿಯನೆಸಗೆ |
ಮುಂದ್ವರಿಸಬಿಡೆನು ನಲ | ವಿಂದ ಹೆಣವನು ಕೊಟ್ಟು |
ವಂದಿಸಲು ಪೊರೆವೆ ಖತಿ ಮಸಗೆ || ೩ ||

ಕೊಡೆನೆಂದಿಗೂ ಹೆಣವ | ಕಡು ಪೌರುಷದ ಗರ್ವ |
ನಡೆಯಗೊಡೆ ಬಂದಂತೆ ಸಾರು ||
ಕಡುಹುತನದಿಂದೆನ್ನ | ಪೊಡವಿಯೊಳು ಸ್ಪರ್ಧಿಪನ |
ಕಡೆಗಾಲವೆನಲು ನೀನಾರು || ೪ ||

ಏನಹಂಕಾರ ನಿನ | ಗೇನೇನೋ ಗಳಹೆ ಘನ |
ತ್ರಾಣಿಯೆಂದಾನಂಜಲುಂಟೆ ||
ಭಾನು ಬೆಳಗಲು ತಿಮಿರ | ತಾನೋಡದೇ ಸಮರ |
ತಾನೆ ನಿನಗಾಯಮನ ನಂಟೆ || ೫ ||

ನಿನ್ನವರ ಬವಣೆಯನು | ಕಣ್ಣಿಂದ ಕಂಡವನು |
ಚೆನ್ನಾಗಿ ಗ್ರಹಿಸಲಿಲ್ಲೇಕೆ ||
ಪನ್ನಗಕೆ ಗರುಡನಲಿ | ಪನ್ನತಿಕೆಯೇನ್ಕನಲಿ |
ಮಣ್ಣು ಮುಕ್ಕಿಸಬೇಕೆ ಜೋಕೆ || ೬ ||

ಹುಚ್ಚುಹುಚ್ಚಾಡಿದರೆ | ಕೊಚ್ಚಿ ಜಿಹ್ವೆಯನಿದಿರೆ |
ಬಿಚ್ಚುವೆನು ನಿನ್ನ ಮಾಂಸವನು ||
ಎಚ್ಚರಿಕೆ ನಮ್ಮವರ | ಬೆಚ್ಚಿಸಿದ ಗರ್ವವಿರ |
ಲುಚ್ಚರಿಪುದಲ್ಲ ತೋರಿದನು || ೭ || || 159 ||

**ಭೈರವಿ - ಏಕ**
ಎನೆ ನೃಪಸುತ ಕೋಪಿಸುತ | ತೆಗ |
ದನಿಲಾಸ್ತ್ರವ ಬಿಡಲಾತ ||
ಫಣಿಶರದಿಂದದ ತರಿಯೆ | ಇವ |
ನನಲಖಗವ ನೊಡನೆಸೆಯೆ || ೧ ||

ಜಲ ಬಾಣದಿ ಖಂಡಿಸಲು | ಖತಿ |
ತಳೆಯುತ ಫಣಿಶರ ಬಿಡಲು |
ತಳುವದೆ ಗರುಡಾಸ್ತ್ರದಲಿ | ಕಡಿ |
ದಿಳುಹಲು ಸಾಮರ್ಥ್ಯದಲಿ || ೨ ||

ಇಂದ್ರಾಸ್ತ್ರವ ತೆಗದಿಡಲು | ಶಚಿ |
ಯಿಂದವ ಮೋಹಿಸಿ ಗೆಲಲು ||
ಮುಂದಿವನನು ಬಿಡೆನೆಂದು | ವರ |
ಚಂದ್ರಾಯುಧವಿಡಲಂದು || ೩ || || 162 ||

**ಭಾಮಿನಿ**
ಘೋರ ಚಂದ್ರಾಯುಧವ ಕಾಣುತ |
ಲಾರುಭಟಿಸುತ ವಿವಿಧ ರೂಪದಿ |
ಸಾರೆ ಬೆಂಬೊತ್ತಲ್ಕೇ ಭಯದಿಂದಾಗ ಭೇತಾಳ ||
ಮೂರು ಲೋಕದೊಳಿದರನಿದಿರಿಸ |
ಲಾರಿಗಳವಲ್ಲೆನುತ ನೃಪನ ಕು |
ಮಾರನಂಘ್ರಿಗೆ ಮಣಿದು ಕಾಪಾಡೆನುತಲಿಂತೆಂದ || ೧ || || 163 ||

**ಜಂಜೂಟಿ - ಅಷ್ಟ**
ಕಾಪಾಡಬೇಕು ನೀನೆನ್ನ | ಹೇ |
ಭೂಪಾಲ ತನೆಯ ಸಂಪನ್ನ ||
ಕೋಪಿಸದಿರು ಸುಪ್ರ | ತಾಪನಹುದು ನೀನು |
ಈ ಪರಿಯೊಳಾ | ಠೋಪ ತೋರ್ದೆ ಮ |
ಹಾ ಪುರುಷ ಭಲೆ | ಮಾಪಿ ಮಾಡೈ || ೧ ||

ಚಂದ್ರಾಯುಧವ ಹಿಂದೆ ಕರೆದು | ಎ |
ನ್ನಿಂದಾದ ತಪ್ಪನು ಮರೆದು ||
ಚಂದದೊಳೊಲವಾಂತು | ಮುಂದಕುದ್ಧರಿಸು ನೀ |
ನೆಂದ ತೆರದಲಿ | ಹೊಂದಿ ನಡೆವೆನು |
ಬಂದ ಕಷ್ಟವ | ನಿಂದು ಬಿಡಿಸೈ || ೨ ||

ಪುರದಿಂದ ಬಹುದೂರ ನೆಲಸಿ | ನಿನ |
ಗಿರುವಭಿಷ್ಟಗಳನ್ನು ಸಲಿಸಿ ||
ಸ್ಮರಿಸಿದಾಕ್ಷಣ ಬಂದು | ಶರಣೆಂದು ನೇಮವ |
ನರಿತು ನಡೆಸುತ | ಬರುವೆನೆಂದಿಗು |
ಕರುಣದಿಂ ಸ್ವೀ | ಕರಿಪುದೆನ್ನನು || ೩ || || 166 ||

**ವಾರ್ಧಕ**
ಎಂದು ಕೊಂಡಾಡಿ ಪೊಡಮಟ್ಟು ಬೇಡಲ್ಕೆ ನೃಪ |
ನಂದನಂ ಕರುಣೆಯಿಂದಭಯವಿತ್ತುಪಮಂತ್ರ |
ದಿಂದ ಚಂದ್ರಾಯುಧವ ಪಿಂತೆಗೆಯೆ ಭೇತಾಳ ನೆನೆದಾಗ ಬರುವೆನೆಂದು ||
ಮಂದಿ ಸಹ ಪುರದ ಬಹು ದೂರಕೈದಲ್ಕಿತ್ತ |
ಲಂದಾದುದೆಲ್ಲವಂ ತಿಳಿದೂರ್ವಶಿಯು ಕರುಣೆ |
ಯಿಂದಲಮೃತದ ಬಿಂದ ಸುರಿಸೆ ಕಂಜಾಕ್ಷನೆದ್ದಂ ನಿದ್ದೆ ತಿಳಿದಂದದಿ || ೧ || || 167 ||

**ಭಾಮಿನಿ**
ಬಳಿಕಲಂಬರದಿಂದಲೆಲ್ಲವ |
ತಿಳುಹುತೂರ್ವಶಿ ತನ್ನ ತಪ್ಪನು |
ಕಳೆದು ಮನ್ನಿಸಿರೆನುತ ಗಮಿಸಲ್ಕಿತ್ತ ಕಂಜಾಕ್ಷ ||
ನಲವಿನಿಂ ಭಾವನನು ತಬ್ಬ |
ಲ್ಕುಲಿಯುತಲಿ ವರ ರಾಜಹಂಸನು |
ಭಳಿರೆ ಭಾಗ್ಯವಿದೆನುತ ಕೊಂಡಾಡಿದನು ವಿಧಿಮಹಿಮೆ || ೧ || || 168 ||

**ಶಂಕರಾಭರಣ - ತ್ರಿವುಡೆ**
ವಾರ್ತೆಯಿದನಾಲಿಸುತ ಹರುಷದಿ |
ಕಾರ್ತಿಕೇಯ ನೃಪಾಲನು ||
ಪುತ್ರಜಾಮಾತರನು ಕರೆಸುತ | ಲರ್ಥಿಯಿಂದ || ೧ ||

ಮನ್ನಿಸುತ ಕೊಂಡಾಡೆ ಪುರಜನ |
ರುನ್ನತೋನ್ನತ ಪೊಗಳಲು ||
ಖಿನ್ನನಾಗಿರೆ ಕಂಜನೇತ್ರನ | ದನ್ನು ನೋಡಿ || ೨ ||

ರಾಜಹಂಸನು ಕರೆದು ಹತ್ತಿರ |
ರಾಜಿಸದು ಮುಖವೇನಿದು ||
ಸೋಜಿಗವು ಮನಕೇನು ಯೋಚನೆ | ಮಾಜದುಸುರು || ೩ ||

ಕಾರಣವೇನಿದ್ದರದನು ನಿ |
ವಾರಿಸುವೆನಿದು ನಿಶ್ಚಯ ||
ವೀರತೆಯ ನೀನರಿತಿರುವಿಯೆನೆ | ಧೋರನೆಂದ || ೪ || || 172 ||

**ಮಧುಮಾಧವಿ - ಏಕ**
ಭಾವ ಕೇಳೆನ್ನಯ | ಭಾವನೆಗಳನು |
ಭಾವಜನರಗಿಣಿ | ಯಾವೂರ್ವಶಿಯನು ||
ಭಾವಿಸಿ ಭಾವಿಸಿ | ಯೀವಿಧವಿಹೆನು |
ನಾ ವಿವರಿಸಲೇನು | ಕೋವಿದ ನೀನು || ೧ ||

ಅವಳಂಗ ಸಂಗ ಸಂ | ಭವಿಸುವದೆಂತು |
ವಿವರವನರಿಯದೆ | ತವಿಸುವೆನಿಂತು ||
ಕುವಲಯ ಶರಬಾಧೆ | ಯವಯವದಾಂತು |
ನವೆವುದೆಯೆನಗಾ | ಯುವತಿಯ ಭ್ರಾಂತು || ೨ ||

ಅಂಬರದಿಂದವ | ಳೆಂಬಾಗ ನೋಡಿ |
ಬಿಂಬಾಧರೆಗೆ ಮನ | ತುಂಬಿದುದೋಡಿ ||
ಕಂಬುಕಂಧರೆಯ ಸೌ | ರಂಭದ ಮೋಡಿ |
ಬೆಂಬಿಡದೆನ್ನ ತ | ನ್ನಿಂಬಿನೋಳ್ಮಾಡಿ || ೩ || || 175 ||

**ಭಾಮಿನಿ**
ಹೇಳಿ ಫಲವೇನೆನ್ನ ಚಿಂತೆಗೆ |
ಮೂಲವದುವೇ ಹೊರತು ಬೇರಿ |
ಲ್ಲಾ ಲತಾಂಗಿಯು ದೊರೆವಳೆಂತೋ ತಿಳಿಯೆನೆಂದೆನಲು ||
ಕೇಳಿ ವಿಸ್ಮಿತನಾಗಿ ಯೋಚಿಸಿ |
ತಾಳಿ ಧೈರ್ಯವ ರಾಜಹಂಸನು |
ಪೇಳಿದನು ಕಂಜಾಕ್ಷನೊಳು ನೀ ಮರುಗಬೇಡೆನುತ || ೧ || || 176 ||

**ಭೈರವಿ - ಝಂಪೆ**
ಭಾವ ನೀನಿದಕಾಗಿ | ಯೀ ವಿಧದಿ ಮರುಗದಿರು |
ಆವ ಬಗೆಯಿಂದಾದ | ರಾ ವನಜಮುಖಿಯ || ೧ ||

ತಂದು ನಿನಗೊಪ್ಪಿಸುವೆ | ಚಂದ್ರಾಯುಧದ ಶಕ್ತಿ |
ಯೊಂದಿರಲು ಯೆನಗೇತ | ರಿಂದ ಭಯವಿಹುದು || ೨ ||

ನಿನ್ನ ಸುಖದುಃಖದಲಿ | ಯೆನ್ನದೂ ಭಾಗವಿಹು |
ದೆನ್ನಲೀ ಕಾರ್ಯಕಾ | ನಿನ್ನು ಮುಂದ್ವರಿವೆ || ೩ ||

ಎನುತವನ ಸಂತೈಸಿ | ಮಣಿದು ಮಾವನೊಳರುಹಿ |
ಸನುಮತವ ಗೊಳಿಸುತ | ಪ್ಪಣೆ ಪಡೆದು ಪೊರಟ || ೪ ||

ಪುರದ ಹೊರಪಾರ್ಶ್ವಕೈ | ತರುವ ಭೇತಾಳನನು |
ಸ್ಮರಿಸಲವನೈತಂದು | ಶರಣೆನುತಲೆಂದ || ೫ || || 181 ||

**ಮಾರವಿ - ಏಕ**
ಧರಣಿಪ ತರಳನೆ | ಸ್ಮರಿಸಿದುದೇತಕೆ |
ಪರಿಭವವೇನಾಯ್ತು ||
ಅರುಹಿದರೆನ್ನೊಳು | ಸರಿಗೈವೆನು ನಾ |
ನಿರೆ ಬರದು ವಿಪತ್ತು || ೧ ||

ಜಗವನೆ ಮುಕ್ಕುವೆ | ನಗವನೆ ತಿಕ್ಕುವೆ |
ಬಗೆವೆನೆ ಭೈರವನ ||
ಸುಗುಣನೆ ಮನಸಿನ | ಬಗೆಯನು ಪೇಳೆಂ |
ಬಗೆ ನುಡಿದನು ಹದನ || ೨ || || 183 ||

**ಕೇದಾರಗೌಳ - ಅಷ್ಟ**
ಭೇತಾಳ ಕೇಳೊಂದು | ಮಾತಿನ ಬಗೆಗಿಂದು |
ಭೂತಳವನ್ನು ಬಿಟ್ಟು ||
ಈ ತತೂಕ್ಷಣ ಸುರ | ನಾಥನ ಪುರಕೆ ಪೋ |
ಪಾತುರವಿರುವದಷ್ಟು || ೧ ||

ಹೊತ್ತುಕೊಂಡೆನ್ನ ನೀ | ನತ್ತ ಸಾಗಿಸಿ ಕಾರ್ಯ |
ಪೂರ್ತಿಯಾಗಲು ಬಳಿಕ ||
ಇತ್ತ ತಂದಿಳುಹದೇ | ಕರ್ಥವಾಯಿತೆಯೆನ |
ಲುತ್ತರಿಸಿದ ನಗುತ || ೨ ||

ಸರಿಸರಿ ಯಿದು ದೊಡ್ಡ | ಹೊರೆಯಲ್ಲ ಕೊಂಡೊಯ್ದು |
ಸುರಪುರದೊಳು ಬಿಡುವೆ ||
ಬರಲೊಳಗಳವಲ್ಲ | ವರಿಯಿತೆ ಮನಕೆಲ್ಲ |
ಹೊರುತಲೀಕ್ಷಣ ನಡೆವೆ || ೩ || || 186 ||

**ಭಾಮಿನಿ**
ಎಂದು ಭುಜದಲಿ ಕುಳ್ಳಿರಿಸಿ ನೃಪ |
ನಂದನನ ನಿಮಿಷದಲಿ ಸುರಪುರ |
ಕಂದದಿಂ ತಲುಪಿಸಿಯೆ ಬೀಳ್ಕೊಟ್ಟೈದೆ ಭೇತಾಳ ||
ಬಂದು ಬಳಿಕಾ ರಾಜಹಂಸನು |
ನಿಂದು ವೃಂದಾವನದ ಬಳಿಯೊಳು |
ಮುಂದೆ ನೋಡಲಿಕಲ್ಲಿ ಕಂಡನು ಸುರಪನಣುಗಿಯನು || ೧ || || 187 ||

**ಕಂದ ಪದ್ಯ**
ಕುಸುಮಗಳಂ ಕೊಯ್ಯುತ್ತಲಿ |
ನಸುನಗೆಯಂ ಬೀರ್ವ ಸೂರ್ಯ ಕಾಂತಾಮಣಿಯಂ ||
ತುಸು ದೂರದಿ ಕಂಡವ ಬೆ |
ಕ್ಕಸ ಬೆರಗಾಗುತ್ತ ತನ್ನ ಮನದೊಳಗೆಂದಂ || ೧ || || 188 ||

**ಶಂಕರಾಭರಣ - ಅಷ್ಟ**
ಯಾರಿದೂ | ಸೌಂದರ್ಯ ಸನ್ಮೋಹಿನಿ | ಯಾರಿದೂ |
ಯಾರಿದು ಸೌಂದರ್ಯಮಣಿಯೂ | ವೈ |
ಯಾರದ ಸ್ಮರನರಗಿಣಿಯೂ ಮದ |
ವಾರಣಗಾಮಿನಿ ವಾರಿಜನಯನೆ ಶೃಂ |
ಗಾರಿಣಿ ನಸುನಗೆ | ಬೀರುತಲಿರುವಳು || ಪ ||
ಬಾಲಚಂದ್ರನೆ ನಡೆತಂದೂ | ಆ |
ಫಾಲಪ್ರವೇಶದಿ ನಿಂದೂ | ಈ |
ಲೀಲೆಯೊಳೆಸೆವನೊಯೆಂದೂ | ಸೊಬ |
ಗೇಳುತಲಿರುವದೇನೊಂದೂ | ಅದ |
ಹೇಳಲಿಕಳವಲ್ಲ | ನೀಲಾಳಕಿಯು ಮೆಲ್ಲ |
ನೇಳಲು ಬೀಸುವ | ಗಾಳಿಗೆಂತಹ ಗಂಧ || ೧ ||

ಕನ್ನಡಿಯಂತ ಕಪೋಲಾ | ಹಾ |
ಕನ್ನೆಯ ವರ್ಣಿಸೆ ಸೋಲ | ಸಂ |
ಪನ್ನೆಯ ಚೆಲುವು ಸಮೂಲಾ | ನೋಡ |
ಲುನ್ನತ ಕುಚಕೆಣೆ ಸಾಲಾ | ಬ್ರಹ್ಮ |
ಚೆನ್ನೆಯಿವಳ ಸೃಷ್ಟಿ | ಯನ್ನೆ ಮಾಡುತ ತುಷ್ಟಿ |
ಪೂರ್ಣಾನಾದನೆ ಯೆಷ್ಟಿ | ದೆನ್ನಲು ಸಂತುಷ್ಟಿ | ಯಾರಿದು || ೨ || || 190 ||

**ಭಾಮಿನಿ**
ದೇವತಾಸ್ತ್ರೀಯರೊಳಗಿವಳಿ |
ನ್ನಾವಳೋ ನಾನರಿಯದಾದೆ ಪ್ರ |
ಭಾವಳಿಯು ದಶದಿಕ್ಕ ಪಸರಿಸುತಿಹುದು ಮುದವಹುದು ||
ಈ ವಿಧದ ಸೌಂದರ್ಯವೆಲ್ಲಿಯು |
ಭಾವಿಸಲ್ಕಿನ್ನಿರದು ನುಡಿಸಿಯೆ |
ಭಾವಕಿಯ ಬಗೆಯರಿವೆನೆನುತಲಿ ಮಾತನಾಡಿಸಿದ || ೧ || || 191 ||

**ಕಾಂಬೋಧಿ – ಝಂಪೆ**
ಯಾರೆ ಪನ್ನಗವೇಣಿ | ನೀರೆ ಮಂಜುಳವಾಣಿ |
ಮಾರನರಗಿಣಿ ಸುಗುಣಶ್ರೇಣಿ ||
ಸಾರಸಾಂಬಕಿ ನಿನ್ನ | ಮೋರೆ ನೋಡೆ ಪ್ರಸನ್ನ |
ಸಾರಸೌಭಾಗ್ಯ ಕಲ್ಯಾಣಿ || ೧ ||

ಕುಸುಮ ಕೋಮಲೆ ವಿಮಲೆ | ಪೆಸರೇನು ನಿನ್ನದೆಲೆ |
ಬಿಸಜಗಂಧಿನಿ ವಿಜಯ ಮಾಲೆ |
ಉಸುರು ಪಿತನಾರೆನುತ | ವಿಷಯವೆಲ್ಲವನಹಿತ |
ವೆಸಗುವವನಲ್ಲ ಶಶಿಫಾಲೆ || ೨ ||

ಮಾಳವ ನೃಪಾಲಕನ | ಬಾಲಕನು ನಾನು ಘನ |
ಶೀಲನಾಗಿಹೆ ರಾಜಸಿಂಹಾ ||
ಕಾಳಗದಿ ವೈರಿಕುಲ | ಕಾಲನೆನ್ನಿಸಿ ಸಕಲ |
ಖೂಳರನು ಗೆಲಿದ ರಣಸಿಂಹ || ೩ ||

ರೂಪದಲಿ ಹೇಗೆಂದು | ನಾ ಪೇಳಲದು ಕುಂದು |
ನೀ ಪರೀಕ್ಷಿಸಲು ತಿಳಿದವಳು ||
ಕೋಪಿಸದಿರೆನ್ನೊಡನೆ | ಸಾಫಲ್ಯಗೊಳಿಸೊಡನೆ |
ಲೋಪ ಬರದಿನ್ನಾವುದರೊಳು || ೪ || || 195 ||

**ಕಂದ ಪದ್ಯ**
ನುಡಿಯಂ ಕೇಳುತ ನರನಾ |
ದೊಡೆಯುಂ ಗುಣರೂಪ ಲಕ್ಷಣಾನ್ವಿತನಿವನುಂ ||
ಕೆಡುಕೇನಾಗದು ಪರಿಚಯ |
ಕೊಡಲೆಂದೆಣಿಸುತಲಿ ಬಾಲೆಯವನೊಡನೆಂದಳ್ || ೧ || || 196 ||

**ಭೈರವಿ - ಝಂಪೆ**
ನರನಾಥಸುತ ಕೇಳು | ಸುರಲೋಕವನ್ನಾಳು |
ತಿರುವ ದೇವೇಂದ್ರನಿಗೆ | ತರಳೆಯಾಗಿಹೆನೂ || ೧ ||

ಪೆಸರು ರವಿಕಾಂತಿ ಯೆಂ | ದೆಸೆಯುವುದು ನಾನಿತ್ತ |
ಕುಸುಮಗಳ ಕೊಯ್ಯಲೆಂ | ದೊಸಗೆಯಿಂ ಬಂದೇ || ೨ ||

ಇತ್ತ ನೀ ಬಂದುದು ವಿ | ಚಿತ್ರವಿದ ತಿಳಿಯೆ ಪಿತ |
ಮತ್ತೇನ ಗೈವನೊ ವಿ | ಪತ್ತನೆಳಕೊಂಡೇ || ೩ ||

ನರರು ನಿಜದೇಹದಲಿ | ಬರುವದಿಲ್ಲಿಗಸಾಧ್ಯ |
ವರಪುಣ್ಯ ಬೇಕದ | ಕ್ಕರಿಯೆಯಾ ನೀನೂ || ೪ || || 200 ||

**ಕೇದಾರಗೌಳ - ಝಂಪೆ**
ಎನಲೆಂದನೆಲೆ ಕಾಮಿನೀ | ಇದನೆಲ್ಲ |
ವನು ಬಲ್ಲೆ ಗಜಗಾಮಿನೀ ||
ಮುನಿಪ ವಾಲ್ಮೀಕಿಯನ್ನೂ | ಸೇವಿಸುತ |
ಘನ ಪುಣ್ಯ ಪಡದಿರುವೆನೂ || ೧ ||

ಆ ಬಗೆಯದೇನೊ ತಿಳಿಯೇ | ಆದರೆ |
ಮ್ಮೀಭಾಗಕಿನಿತು ಸರಿಯೇ ||
ಹೇಗೊ ಪಿತನರಿವನೆಲ್ಲಾ | ಭಯವಹುದು |
ಯೋಗ ನಿನಗೆಂತೊ ಮಲ್ಲಾ || ೨ ||

ಭಯವಿಲ್ಲವೆನಗೆ ಬಾಲೇ | ಸ್ಪಷ್ಟವಾ |
ಗಿಯೆ ಪೇಳ್ವೆ ನಿನ್ನ ಮೇಲೇ ||
ಬಯಕೆಯಾಗಿರ್ಪುದೆನಗೇ | ತವ ಯೋಚ |
ನೆಯದೆನಿತು ಹಿತವೆ ನಿನಗೇ || ೩ ||

ಸ್ವಾತಂತ್ರ್ಯಳಲ್ಲವದಕೇ | ಪಿತನೆನ್ನ |
ಲಾತೆರದಿ ನಡೆಯುವಾಕೇ ||
ಯಾತಕಿನ್ನಾ ಯೋಚನೇ | ಅದರಿಂದ |
ಮಾತಾಡಲೆಂತು ನಾನೇ || ೪ ||

ಇರಲಿರಲಿ ನಿನ್ನ ಮನಕೇ | ಬಂದುದ |
ನ್ನರುಹಲನುಮಾನವೇಕೇ ||
ಕೊರತೆಯೆನಗೇನದಿಹುದೂ | ಕಂಡರದ |
ಮರೆಮಾಜದುಸುರಬಹುದೂ || ೫ ||

ರೂಪಾತಿಶಯದಿ ನೀನೂ | ಕಡಿಮೆಯೆಂ |
ಬೀ ಪಾಪವೆನಗದೇನೂ ||
ಆಪಡಾಗದಡದರನೂ | ಕಾರ್ಯಪ್ರ |
ಸ್ತಾಪಿಸಲು ಪಿತನಿಪ್ಪನೂ || ೬ ||

ಭಳಿರೆ ಬಲು ಜಾಣೆ ನೀನೂ | ಒಗಟಿನಂ |
ತೊಳಗೆ ಹೊರಗಿಕ್ಕದುದನೂ ||
ತಿಳಿಯಲಳವಲ್ಲವೆಂದೂ | ಎಣಿಸಿದೆಯ |
ಬಳಲಿಸದಿರೆನ್ನ ಮುಂದೂ || ೭ || || 207 ||

**ಭಾಮಿನಿ**

ಎಂದವರು ಮಾತಾಡುತಿರಲದ |
ರಂದವನು ವನಪಾಲನೀಕ್ಷಿಸಿ |
ಯಿಂದಿದೇನ್ ಹೊಸಬಗೆಯ ನರನಾರಿವನು ಯೆನಿತಿಲ್ಲ ||
ಬಂದನೋ ಹಾ ದೊರೆಯೊಡನೆ ನಾ |
ನೆಂದರೆಯೆ ಲೇಸಪ್ಪುದೆನುತವ |
ಬಂದರುಹಲೆಲ್ಲವನು ಮಘವನು ಕೇಳಿ ಖತಿಯಾಂತ || ೧ || || 208 ||

**ಸೌರಾಷ್ಟ್ರ - ತ್ರಿವುಡೆ**

ಕೇಳಿದಿರೆ ಶಿಖಿ ಮುಖ್ಯರಾವನ |
ಪಾಲನಾಡಿದ ನುಡಿಯ ಬಡ ನರ |
ಬಾಲನೋರ್ವನು ಬಂದನೆಂತಿಹೆ | ತಾಳಲಹುದೆ || ೧ ||

ಪುತ್ರಿಯೊಡನೇನೇನೊ ಹರಟುತ |
ನಿತ್ತನೆಂದರಿದೇನ್ವಿಚಿತ್ರ ಮ |
ಹತ್ತರವಿದಾಯ್ತವಗೆ ಗರ್ವವು | ಹತ್ತಿತೇನು || ೨ ||

ಬಂದವಗೆ ಸರಿಯಾದ ಶಾಸ್ತಿಯ |
ನಿಂದು ಮಾಡಿಯೆ ನಮ್ಮ ಬಗೆಯೇ |
ನೆಂದು ತೋರಿಸಬೇಕು ಬರದೋ | ಲ್ಯಾಂದಕಾರು || ೩ ||

ಏನು ನಿಮ್ಮಭಿಮತವು ನೀವನು |
ಮಾನವಿಡದರುಹಿಸುವುದೆನೆ ವೈ |
ಶ್ವಾನರನು ದೇವೇಶಗೆಂದನು | ತ್ರಾಣದಿಂದ || ೪ ||

ಇದಕೆ ಯೋಚನೆಯೇಕೆ ನಮ್ಮೀ |
ತ್ರಿದಶ ಪುರವನು ಪೊಕ್ಕ ಮನುಜನ |
ಸದೆಯದಿರ್ದರೆ ಮತ್ತೆ ಫಲವೇ | ನಧಟರಾಗಿ || ೫ ||

ಕಾಲಮಹಿಮೆಯಿದಲ್ಲದಿರ್ದಡೆ |
ಕಾಲನಿಡುವನೆ ಮನುಜನಿಲ್ಲಿಗೆ |
ಕಾಲನನು ಕಾಂಬನವ ನಿಮಿಷದಿ | ಕಾಳಗದಲಿ || ೬ ||

ಮುನಿದೆನಾದರೆ ತಡೆವರಾರೆ |
ನ್ನನು ಸಮಸ್ತವ ಸುಟ್ಟುಬಿಡುವವ |
ನೆನುವದರಿಯೆಯ ಯೆನಲು ಮಾರುತ | ಕನಲುತೆಂದ || ೭ || || 215 ||

**ಭೈರವಿ - ಅಷ್ಟ**
ದೇವೇಂದ್ರ ಲಾಲಿಸಯ್ಯಾ | ಮಾನವನೊಬ್ಬ |
ಗೀವಿಧವಾಯ್ತು ಶೌರ್ಯ ||
ಕಾವರಾರವನನು | ಜೀವಿಸಬಿಡೆ ನಮ್ಮ |
ಠೀವಿಯ ತಿಳಿಯದಾದ || ೧ ||

ಮಂಕು ಮನುಜನವನು | ಅಲ್ಲದಡಿಂಥ |
ಬಿಂಕದೊಳೇಳ್ವನೇನು ||
ಹೂಂಕರಿಸಲು ಸಾಕ | ಜಂಕ್ಯರು ನಾವ್ನರ |
ಸಂಕುಲ ನಿಲ್ಲಲುಂಟೆ || ೨ ||

ಇಂತಿರಲೆನಗಿವನು | ಗಣ್ಯವೆ ಬಿಡು |
ಪಂಥವ ನೋಡುವೆನು ||
ಕಂತುಹರನ ದಯ | ವಾಂತಿಹ ನಮ್ಮೆಡೆ |
ಯಿಂತವರೆಂತಿಪ್ಪರು || ೩ || || 218 ||

**ಭಾಮಿನಿ**
ಸುರಪನದನಾಲಿಸುತ ಸಂತಸ |
ಭರಿತನಾಗುತ ನಾವು ಸರ್ವರು |
ಪರಿಕಿಸಿಯೆ ಬಳಿಕವಗೆ ಶಾಸ್ತಿಯ ಮಾಳ್ಪುದೆಂದೆನುತ ||
ಅರುಹುತವರೊಡನೈದೆ ಬಹುದನು |
ನಿರುಕಿಸುತಲಾ ರಾಜಹಂಸನು |
ತರುಣಿಯೊಡನಾಡುವುದ ನಿಲಿಸುತ ತಿರುಗೆ ಕಂಡಾಗ || ೧ || || 219 ||

**ಶಂಕರಾಭರಣ - ಮಟ್ಟೆ**
ಮರುತನೆಂದನೆಲವೊ ಮನುಜ |
ಬರುತ ನಮ್ಮ ಪುರಕೆ ವನದ |
ಸರಿಸದಲ್ಲಿ ಸುರಪಸುತೆಯೊ | ಳ್ಸರಸವೇನೆಲ || ೧ ||

ಬಂದೆನೊಂದು ಕಾರ್ಯಕಿತ್ತ |
ಸುಂದರಿಯನು ಕಂಡು ನುಡಿಸ |
ಲೆಂದು ನಿತ್ತೆ ನೀನದಾರು | ನಿಂದು ಕೇಳ್ವವ || ೨ ||

ವಾಯುವೆನಲು ನಾನೆ ನರನೆ |
ನ್ಯಾಯವಲ್ಲ ಬಂದುದಿಲ್ಲಿ |
ಸಾಯುವಾಸೆಯಾಯ್ತೆ ನಿನ್ಗೆ | ಸಾಯಕಾರಿಲ್ಲ || ೩ ||

ಗಂಧವಾಹನಾದರೇನು |
ಚಂದವಾಯ್ತು ಬೆದರೆ ನಾನು |
ಬಂದು ಬರಿದೆ ಪೋಗೆ ಕಾರ್ಯ | ಹೊಂದದಂತೆಯೆ || ೪ ||

ನರನೆ ಸಾಕು ಗರ್ವವೆನುತ |
ಮರುತ ಕೋಪದಿಂದ ಶರವ |
ಸುರಿಯೆ ರಾಜಹಂಸನದನು | ಮುರಿದು ಕೆಡಹುತ || ೫ ||

ಮುನಿಪನಿತ್ತ ಭಾಸ್ಕರಾಸ್ತ್ರ |
ವನು ಕರಾಳನಾಗಿ ಬಿಡಲು |
ಅನಿಲನದಕೆ ಬಾಗಿ ಸರಿದ | ಕ್ಷಣದಿ ಹಿಂದಕೆ || ೬ || || 225 ||

**ಭೈರವಿ - ಝಂಪೆ**
ತಡದೆಂದನಗ್ನಿ ಘಡ | ಬಡ ಮನುಜ ನಿನಗಿಂತು |
ಕಡುಹಾಯ್ತೆ ಮರುತನೊಳು | ಪಡದೆಯಾ ಜಯವ || ೧ ||

ಪಡೆದೆ ಜಯ ನೀನವನ | ಕಡೆಯಿಂದ ಬಂದೆನ್ನ |
ತಡೆದಾತನಾರು ನಿನ | ಗಡರಿತೇ ಗರ್ವ || ೨ ||

ಎನ್ನ ಕೇಳ್ವೆಯ ಮನುಜ | ಕುನ್ನಿ ನಾನೇ ವಹ್ನಿ |
ಯೆನ್ನಲೀ ಮೂಲೋರ್ಕ | ವನ್ನೆ ಸುಡಬಲ್ಲೆ || ೩ ||

ಅಷ್ಟೊಂದಹಂಕಾರ | ಪಟ್ಟುಕೊಳ್ಳದಿರಾರ |
ದೆಷ್ಟು ಸಾಹಸವೆಂಬು | ದೊಟ್ಟು ತಿಳಕೊಂಬೆ || ೪ ||

ನರನೆ ನಮ್ಮಯ ನಾಕ | ಪುರವ ಸೇರಲನೇಕ |
ತರ ಪುಣ್ಯ ಬೇಕದ | ನ್ನರಿಯದಡರಿದೆಯ || ೫ ||

ಅರಿತೆ ನಾ ಬಂದಿಹೆನು | ಸುರರಾಜ ಮಘವನನು |
ಪರಿಕಿಸುತ ಮಾತಾಡ | ಲಿರುವೆ ನೀ ತೆರಳು || ೬ ||

ತೆರಳುವೆನು ನಾ ನಿನಗೆ | ಸರಿ ಶಾಸ್ತಿಗೈದು ಬಗೆ |
ಯರರೆ ಪೊಸತಿದು ದಿವಿಜ | ರರಸ ನಿನಗೇಕೆ || ೭ ||

ಶಾಸ್ತಿಮಾಡುವ ಮಾತ | ನೆತ್ತಿದರೆ ಜಾಗ್ರತೆಯು |
ನಿತ್ತು ಹೋರಾಡಾಗ | ಮತ್ತತನವಿಳಿಗು || ೮ ||

ಎನಲು ಕೋಪಿಸಿ ಶಿಖಿಯು | ಕಣೆಯೊಂದನೆಸೆಯಲದ |
ಗಣಿಸದಾಕ್ಷಣ ಕಡಿದು | ಕನಲಿ ನೃಪತನಯ || ೯ ||

ಚಂದ್ರಾಯುಧವನೆತ್ತೆ | ನಿಂದರಪಜಯವಪ್ಪು |
ದೆಂದರಿತು ಪಾವಕನು | ಹಿಂದಕೋಡಲ್ಕೆ || ೧೦ || || 235 ||

**ಭಾಮಿನಿ**
ನರನೆ ಕೇಳೈ ರಾಜಹಂಸನ |
ಪರಮ ಸಹಸವ ಕಂಡು ಸುರರ |
ಚ್ಚರಿಯೊಳಿರಲಾ ಮೇಘನಾಥನು ನೋಡಿ ಬೆರಗಾಗಿ ||
ಬೆರಳು ಚುಚ್ಚುತ ಮಾನವಂಗಿ |
ಪರಿಯ ಸಹಸವೆ ಸಹಿಸಲೆಂತೆಂ |
ದುರುತರದ ಕೋಪದಲಿ ವಜ್ರವ ತಿರುವಿ ತಡೆದೆಂದ || ೧ || || 236 ||

**ಕಾಂಭೋದಿ - ಝಂಪೆ**
ಭಳಿರೆ ಮಾನವ ತರಳ | ಬಲು ಸಾಹಸದಿ ಪ್ರಬಲ |
ಬಲರ ಜೈಸಿದೆಯ ಯುದ್ಧದಲಿ ||
ಹುಲುನರನೆ ನಮ್ಮ ಪುರ | ದೊಳ ಪೊಕ್ಕು ಸುತೆಯ ಕರ |
ದಲಿಸದೇನೆನುತಿದ್ದುದಿಲ್ಲಿ || ೧ ||

ಸುರಪಾಲಕನೆ ರೋಷ | ಭರಿತನಾಗದೆ ತೋಷ |
ವೆರಸಿ ಕೇಳೆನ್ನ ಮಾತುಗಳ ||
ಬರಲೊಂದು ಕೆಲಸದಲಿ | ತರಳೆಯನು ಕಂಡಿಲ್ಲಿ |
ಪರಿಚಯಕೆ ನುಡಿಸಲೇನ್ ಜಗಳ || ೨ ||

ಇಲ್ಲೇನು ಕಾರ್ಯ ಬರೆ | ಸಲ್ಲದುದನೆಸಗಿದರೆ |
ಕೊಲ್ಲುವೆವು ನಿನಗೆ ಕುವರಿಯಲಿ ||
ಸೊಲ್ಲೇನು ಯಿನಿತೆಲ್ಲ ಮಲ್ಲತನಕಿದೊ ಖುಲ್ಲ |
ನಿಲ್ಲದೊರಗಿಸುವೆ ನಿಮಿಷದಲಿ || ೩ ||

ತರುಣಿಯೂರ್ವಶಿಗೆ ಮನ | ವಿರಿಸುತಲಿ ದುಮ್ಮಾನ |
ದುರಿಗೆನ್ನ ಭಾವ ಬಳಲುವನು ||
ಕರದೊಯ್ಯಲದರಿಂದ | ಬರವಾಯ್ತು ಮುದದಿಂದ |
ಕರುಣಿಪುದು ಯೆನಗಿವಳ ನೀನು || ೪ ||

ಏನನುಸುರಿದೆಯಧಮ | ಮಾನವನೆ ನೀನಮಮ |
ಮಾನಿನಿಯು ದೊರಕುವಳೆ ಮರುಳೆ ||
ಹೀನತನವಿದನಿಂತು | ಕಾಣಿಸಲು ನಿನಗಂತು |
ಪ್ರಾಣದಾಸೆಯು ಹೋಯ್ತು ಮರಳೆ || ೫ ||

ಮತ್ತೊಂದ ನುಡಿವೆ ತವ | ಪುತ್ರಿಯಳನೆನಗೀವ |
ಡರ್ತಿಯಿಂ ಮನಮಾಡಬೇಕು ||
ವ್ಯರ್ಥ ಕೋಪಿಸಲೇಕೆ | ಉತ್ಸಾಹದಿಂದಾಕೆ |
ನಿತ್ರಿಪ್ಪಳೊಪ್ಪೆ ನೀ ಸಾಕು || ೬ ||

ಶಿವ ಶಿವಾ ಯೇನೆಂದೆ | ಹವಣವರಿಯದೆ ಹಂದೆ |
ವಿವರಿಸಿನ್ನೊಮ್ಮೆ ನಾಲಗೆಯ ||
ಸವರಿ ಕಡಿವೆನು ತಲೆಯ | ಕುವರಿ ನಿನಗಿನ್ನೊರಿಯ |
ಅವಕಾಶವಿಲ್ಲವಿನಿತರಿಯ || ೭ ||

ಬರಿದೆ ನೀ ಕೋಪದಲಿ | ಜರೆದಟ್ಟಹಾಸದಲಿ |
ಬಿರುನುಡಿಯನಾಡಿದರೆ ಬಿಡೆನು ||
ಸುರಪನೆಂದಿದುವರೆಗೆ | ಮರಿಯಾದೆಯಿತ್ತೆ ಮಿಗೆ |
ಮರುಳಾಟಕಿನ್ನೆಡೆಯಗೊಡೆನೂ || ೮ || || 244 ||

**ಭೈರವಿ - ಏಕ**
ಆದರೆ ನಿನಗಿನ್ನಂತ್ಯ | ನೀ |
ವಾದಿಸೆ ನಿಲುವೆಯ ಮರ್ತ್ಯ ||
ಭೇದಿಪೆ ಶಿರ ನೋಡೆನುತ | ಬಲು |
ಕ್ರೋಧದಿ ಶರ ಬಿಡಲಾತ || ೧ ||

ತರಿದಿಕ್ಕಲು ಶಿಖಿ ಶರವ | ಸುರ |
ರೆರೆಯನೆಸೆಯೆ ಕಾಣುತವ ||
ವರುಣಾಸ್ತ್ರದೊಳವ ತರಿಯೆ | ಮ |
ತ್ತುರಗ ಖಗವ ತೆಗದೆಸೆಯೆ || ೨ ||

ಗರುಡ ಕಳಂಬದಿ ಮುರಿದು | ಭೂ |
ವರ ತನೆಯನು ಪಲ್ಮೊರೆದು ||
ವರ ಚಂದ್ರಾಯುಧ ತೆಗೆದ | ಬೊ |
ಬ್ಬಿರಿಯುತ ಬಿಡುವರೆ ನೆಗೆದ || ೩ || || 247 ||

**ಭಾಮಿನಿ**
ಪಾರ್ಥ ಕೇಳ್ ಚಂದ್ರಾಯುಧವ ಕಾ |
ಣುತ್ತಲಾ ಸುರನಾಥ ಮನದೊಳು |
ವ್ಯರ್ಥವಿದನಿದಿರಿಸುವುದೆನುತಲಿ ತೊಲಗಿ ಯೋಚಿಸುತ ||
ಕೃತ್ತಿವಾಸನೆ ಹೊರತಿದಕೆ ಬೇ |
ರುತ್ತರವ ಕೊಡಲರಿಯರೆಂದವ |
ಪ್ರಾರ್ಥಿಸಿದ ಪರಶಿವನ ಪರಿಪರಿಯಿಂದ ಕೀರ್ತಿಸುತ || ೧ || || 248 ||

**ಮಧುಮಾಧವಿ - ಏಕ**
ಪಾಲಿಸು ಪರಮ ಪಾವನ ಪಾರ್ವತೀಶಾ |
ಫಾಲನಯನ ಪರಮೇಶ ಗಿರೀಶಾ ||
ಕಾಲಕಂಧರ ಖಳವಂಶವಿನಾಶಾ |
ಕಾಲದುರಿತಹರ ಕೈಲಾಸವಾಸಾ || ೧ ||

ಪುರಹರ ಶಂಕರ ಸರ್ಪವಿಭೂಷಾ |
ಶರಣಾಗತ ಜನ ಭಯ ನಿಶ್ಶೇಷಾ |
ಕರುಣಾಕರ ಕಮಲಾಶುಗನಾಶಾ |
ಕರಿಚರ್ಮಾಂಬರಧರ ಸರುವೇಶಾ || ೨ ||

ಬಡ ನರಕುವರನು ಬಂದೆಮ್ಮ ಪುರಕೇ |
ಬಡಿದು ಸುರರನೆಲ್ಲ ಗೆಲಿದನಬ್ಬರಕೇ ||
ಕಡುಹುತನವದೆನ್ನದೂ ಸಾಲ ಧುರಕೆ |
ಮೃಡನೆ ಬಂದೊಡನೆ ನೀ ಪೊರೆಯೊ ಪರಾಕೇ || ೩ || || 251 ||

**ಸೌರಾಷ್ಟ್ರ - ತ್ರಿವುಡೆ**
ಇಂತು ಮಘವನು ಪ್ರಾರ್ಥಿಸಲು ಕಾ |
ಲಾಂತಕನು ಕೈಲಾಸದಲಿ ಗಣ |
ತಿಂಥಿಣಿಯ ಮಧ್ಯದೊಳಗೊಪ್ಪಿರ | ಲಂತರದಲಿ || ೧ ||

ತಿಳಿದಿದೇನಾಶ್ಚರ್ಯ ತ್ರಿದಶರ |
ಬಳಗಕೀ ತೆರನಾಯ್ತು ಸುರಪಂ |
ಗಳಲು ಬಂತೆನೆ ನಾವು ಸುಮ್ಮನೆ | ಕುಳಿತರೇನು || ೨ ||

ಸುರರ ಕಷ್ಟವ ದೂರಮಾಡುವ |
ಬಿರಿದು ನಮ್ಮದು ಶರಣರನು ನಾವ್ |
ಮರೆಯಲುಂಟೇ ನರನಿಗೀಪರಿ | ಗರುವವಾಯ್ತೆ || ೩ ||

ತರಳ ಬಾ ಬಾ ವೀರಭದ್ರನೆ |
ಸುರಪನನು ಸೋಲಿಸಿದ ಮನುಜಗೆ |
ಸರಿಯ ಶಾಸ್ತಿಯ ಮಾಡಿ ದಿವಿಜರ | ಪೊರೆಯಲೈದು || ೪ ||

ಭೈರವನ ಜೊತೆಗೊಂಡು ಪೋಗೆನ |
ಲಾರುಭಟಿಸುತಲಿದನು ನಿಮಿಷದಿ |
ತೀರಿಸುತ ಬಹೆನೇಕೆ ಸಂಶಯ | ಸಾರಲಿಹೆವು || ೫ ||

ಎಂದು ಭೈರವನೊಡನೆ ಪೊರಟು ಪು |
ರಂದರನ ಬಳಿಗೈದಿ ಭಯ ಬೇ |
ಡೆಂದಭಯವೀಯುತ್ತ ಗರ್ಜಿಸು | ವಂದ ನೋಡಿ || ೬ ||

ಭೂಪನಂದನ ಧೈರ್ಯದಿಂದಿರ |
ಲಾ ಪರಾಕ್ರಮಿ ಭೈರವನು ತಾ |
ಭಾಪುರೇ ನಿಲ್ಲೆನುತಲೆಂದ ಪ್ರ | ತಾಪದಿಂದೆ || ೭ || || 258 ||

**ಮಾರವಿ - ಏಕ**

ಹುಲು ನರಮನುಜನೆ | ನಿಲು ನಿಲು ನಿನ್ನಯ |
ತಲೆ ಕಡಿಯುವೆನೀಗ ||
ಕೊಳುಗುಳದೊಳು ಸುರ | ಬಳಗವ ಗೆಲಿದೆಯ |
ಛಲವಿರೆ ತೋರ್ಬೇಗ || ೧ ||

ಯಾರೈ ನೀ ಸುರ | ವಾರವ ಸಲಹಲು |
ವಾರತೆಯುಸುರೊಡನೆ ||
ಹಾರಾಡುತ ನೀ | ತೋರಿಸೆ ಸಲ್ಲದು |
ಧೀರತೆ ಯೆನ್ನೊಡನೆ || ೨ ||

ಶಿವಗಣದೊಳು ಭೈ | ರವನೇ ನಾನಿಹೆ |
ನವಸಾನವು ನಿನಗೆ ||
ದಿವಿಜಪುರಕೆ ಬಂ | ದವಗಡವೆಸಗಿದ |
ಡವಗೆಂತುಳಿವ ಬಗೆ || ೩ ||

ಎನ್ನಯ ಸಾಹಸ | ವನ್ನರಿಯದೆ ನೀ |
ನೆನ್ನುವ ವಚನವಿದು ||
ಮಿಣ್ಣನೆ ನಡೆ ಸಾ | ಕುನ್ನತನೆನ್ನುವ |
ಪನ್ನತಿಕೆಯು ಸಲದು || ೪ ||

ನುಡಿಗವ ಕೋಪಿಸಿ | ಖಡುಗವ ನೆಗಹಲು |
ಪೊಡವಿಪನಂದನನ ||
ಬಿಡೆ ವಿಧಿಶಕ್ತಿಯ | ನೊಡನೆತ್ತಲ್ಕದು |
ತಡೆಯದೆಂದೋಡಿದನು || ೫ || || 263 ||

**ಭೈರವಿ - ಅಷ್ಟ**

ಕಂಡೆಂದ ವೀರಭದ್ರ | ನಿಲ್ಲೆಲೊ ಫಡ |
ಪುಂಡುಮಾನವನೆ ಕ್ಷುದ್ರ ||
ಭಂಡಾಟಗೈವೆಯ | ಖಂಡಿಪೆ ನಿನ್ನಯ |
ರುಂಡವನೀಕ್ಷಣದಿ || ೧ ||

ಗಣಗಳ ಕೂಟದಲಿ | ನೋಡಲ್ಕೆ ಹೆ |
ಗ್ಗಣ ನೀನು ನೋಟದಲಿ ||
ಗಣನೆಯಲ್ಲೆನಗೆ ಸು | ಮ್ಮನೆಯೆನ್ನ ಕೆಣಕದೆ |
ಕ್ಷಣದಿ ಪೋಗುವದೊಳ್ಳಿತು || ೨ ||

ವೀರಭದ್ರನೊಳು ನಿನ್ನ | ಸಾಮರ್ಥ್ಯದ |
ಹೋರಾಟ ಸಡೆಯದಿನ್ನ ||
ವಾರತೆಯೆತ್ತಲು | ಘೋರನೆ ಜಿಹ್ವೆಯ |
ಚೂರುಚೂರೆಸಗುವೆನು || ೩ ||

ನಿನ್ನಂಥ ತಿಳಿದವರೆ | ಈ ತೆರದೊಳ |
ಗೆನ್ನಲು ಬೇರೆಂಬರೆ ||
ಮನ್ನಣೆ ಮಾತಿಲ್ಲ | ಚೆನ್ನಾಗಿ ಬುದ್ಧಿ ಬ |
ಪ್ಪನ್ನೆಗ ಸೆಣಸೆ ನಿಲು || ೪ ||

ನಿಲ್ಲಲಂಜುವೆನೆ ನಾನು | ನಿನ್ನೊಳು ಸಾರ್ದು |
ದಲ್ಲದೆ ಮತ್ತಿನ್ನೇನು ||
ಎಲ್ಲರ ಗೆದ್ದೆನೆಂ | ಬುಲ್ಲಾಸ ನಿಮಿಷದಿ |
ನಿಲ್ಲುವದೀಗ ನೋಡು || ೫ ||

ಎಂದು ಕಠಾರಿಯನು | ಬೀಸುತ ನಿಲ |
ಲಂದು ನೃಪಾತ್ಮಜನು ||
ಹೊಂದದು ಬೇರಾವು | ವೆಂದೆನುತಲಿ ತನ್ನ |
ಚಂದ್ರಾಯುಧವನೆತ್ತಲು || ೬ || || 269 ||

**ಭಾಮಿನಿ**
ನೋಡುತದನಾ ವೀರಭದ್ರನು |
ಗೂಢವರಿತಿದರೊಡನೆ ಸ್ಪರ್ಧೆಯು |
ಬೇಡೆನುತ ನೆಗೆದೋಡುತೆಲ್ಲವ ಪೇಳೆ ಪರಶಿವಗೆ ||
ಆಡಲೇನಾ ಹರನು ರೋಷಸ |
ಗಾಢನಾಗುತ ಕ್ಷಣದಿ ವೃಷಭಾ |
ರೂಢನಾಗಿಯೆ ಬಂದು ನಿಲೆ ನೃಪಸೂನು ಕೈಮುಗಿದ || ೧ || || 270 ||

**ಕಾಂಭೋದಿ - ಝಂಪೆ**
ಜಯ ನಮೋ ಗಿರಿಜೇಶ | ಜಯ ನಮೋ ಸ್ಮರನಾಶ |
ಜಯ ನಮೋ ಕೈಲಾಸವಾಸ ||
ಜಯ ನಮೋ ಫಣಿಭೂಷ | ಜಯ ನಮೋ ಪರಮೇಶ |
ಜಯ ನಮೋ ಶರಣಜನಪೋಷ || ೧ ||

ಚಂದ್ರಭೂಷಣ ನಿನಗೆ | ಚಂದವೇನಿನಿತು ಬಗೆ |
ಯಿಂದಿದಿರು ಕೋಪಿಸುತಲಿಹುದು ||
ಕಂದನಲ್ಲವೆ ನಾನು | ಕಂದಿಸದಿರೆನ್ನುವನು |
ಕಂದರ್ಪಹರ ಕೀರ್ತಿ ಬಹುದು || ೨ || || 272 ||

**ಮಾರವಿ - ಏಕ**
ಹರನವ ಕೇಳುತ | ಲರುಹಿದನೆಲೆ ನರ |
ತರಳನೆ ನೀನಿಂತು ||
ಸುರಪುರಕೈದುತ | ಸರುವರ ಗೆಲ್ಲುತ |
ಲಿರುವುದು ಸಮವೆಂತು || ೧ || || 273 ||

**ಕಾಂಭೋದಿ - ಝಂಪೆ**
ಕಾಲಕಂಧರ ಶಿವನೆ | ಕಾಲಿಟ್ಟ ಕಾರ್ಯವನೆ |
ಕಾಳೆಸಗಲೆಲ್ಲವರು ಬಂದು ||
ಕಾಳಗಕೆ ನಿಲಲಿಂತು | ತಾಳಿ ಸಹಿಸುವದೆಂತು |
ಕಾಲಕಳೆಯದೆ ಗೆಲಿದೆನಿಂದು || ೧ || || 274 ||

**ಮಾರವಿ - ಏಕ**
ಸುರಗಣರೆಲ್ಲರು | ಧುರಕೈತಂದರು |
ನೆರೆಪೂಜ್ಯರು ನಿನಗೆ ||
ಸರಿಯೇ ಸ್ಪರ್ಧಿಸಿ | ಗರುವವ ತೋರ್ದುದು |
ನರ ಕೇಳಿದುವೆ ಹಗೆ || ೧ || || 275 ||

**ಕಾಂಭೋದಿ - ಝಂಪೆ**
ನಿತ್ತು ಯುದ್ಧಕೆ ಕರೆಯೆ | ಕ್ಷತ್ರಿಯಗೆ ಕರಕರೆಯೆ |
ಕತ್ತರಿಸಲೇಳುವುದೆ ಧರ್ಮ ||
ಮತ್ತವರು ಯಾರೆನುವ | ಗೊತ್ತು ಗುರಿಯೇನ್ ಧನುವ |
ನೆತ್ತಲೇಬೇಕದು ಸ್ವಕರ್ಮ || ೧ || || 276 ||

**ಮಾರವಿ - ಏಕ**
ಗುರುಲಘುವೇನೆಂ | ದರಿಯದೆ ಹೆಣಗುವ |
ಬರಿಮೂರ್ಖಗೆ ಶಾಸ್ತಿ ||
ಸರಿಯಾದುದೆ ನಿನಗಿರುವುದು ಶಿಕ್ಷೆಯೆ |
ಮರೆತಾಡದಿರೊತ್ತಿ || ೧ || || 277 ||

**ಕಾಂಭೋದಿ - ಝಂಪೆ**
ಹರನೆ ಕ್ಷಮಿಸೈ ನೀನು | ಹಿರಿಯರೇ ಕಿರಿಯರನು |
ತರಿಯಲೆಳಸಲು ಸುಮ್ಮನಿಹುದೆ ||
ಹರಣವನು ಕಾಪಾಡ | ಲಿರುವ ಶಕ್ತಿಯ ಪಾಡ |
ಮೆರೆಸಿದರೆ ಮೂರ್ಖನೆನಬಹುದೆ || ೧ || || 278 ||

**ಮಾರವಿ - ಏಕ**
ಭಳಿರೆ ಕುಮಾರನೆ | ಬಲು ಬಲವಂತನೆ |
ಬಲುಮೆಗಳಷ್ಟಿಹುದೇ ||
ಕಲಿತನವೆನುತಲಿ | ತಲೆಯನೆ ಕೊಡುವುದೆ |
ನಿಲಲಾಂ ಗೆಲಲಹುದೇ || ೧ || || 279 ||

**ಕಾಂಭೋದಿ - ಝಂಪೆ**
ಚಂದ್ರಾಯುಧವದಿಹುದು | ಬಂದರಾರ್ಗೆಲಲಹುದು |
ಬಂಧನಕೆ ಬೀಳೆನೆಲ್ಲೆಲ್ಲು ||
ವೃಂದಾರಕರ ಗೆದ್ದು | ದಿಂದು ದೊಡ್ಡಿತೆಯೆದ್ದು |
ನಿಂದವರ ಬಿಡೆನು ನಿಜ ಸೊಲ್ಲು || ೧ || || 280 ||

**ಮಾರವಿ - ಏಕ**

ಚಂದ್ರಾಯುಧವಿಹು | ದೆಂದೀ ಗರ್ವವೆ |
ಕಂದನೆ ನಾ ನೋಳ್ಪೆ ||
ಕಂದದೆ ಸೆಣಸೆ | ನ್ನೊಂದಿಗೆ ನಿನಗಾ |
ನಂದದ ಗತಿ ಮಾಳ್ಪೆ || ೧ || || 281 ||

**ಕಾಂಭೋದಿ - ಝಂಪೆ**

ವಿಧಿಶಕ್ತಿಯಿದರ ಪೆಸ | ರದನೆತ್ತಿ ಬಿಡೆನು ಪೊಸ |
ತೊದಗಲೇನಂಜಿ ನಿಲಲಾರೆ ||
ಕದನವಾದರೆ ಕದನ | ಕದಲದಂತಿಹೆ ಹದನ |
ವಿದ ನೋಡಬಹುದು ಕಣ್ಣಾರೆ || ೧ || || 282 ||

**ಭಾಮಿನಿ**

ಮಾತುಮಾತೀ ತೆರದಿ ಬಿಗಿಯೆ ಕೃ |
ಪಾತಿಶಯಕೆಡೆಯೆಲ್ಲಿ ಗಿರಿಜಾ |
ನಾಥ ಕನಲಲ್ಕಂಡು ಕಲಿತನವೇರೆ ನೃಪಸುತಗೆ ||
ಆ ತತೂಕ್ಷಣ ತಿಳಿದು ತಡೆದರೆ |
ಘಾತವಪ್ಪುದು ಕಾರ್ಯವೆನುತ ವಿ |
ಧಾತ ನಡೆತಂದವರ ನಡುವಿಲಿ ನಿಂದು ಹರಗೆಂದ || ೧ || || 283 ||

**ನವರೋಜು - ಏಕ**

ಏನಿದೇನಿದು ಶಿವನೇ | ಇದ |
ಕೇನೆನ್ನಲಾನ್ಬವನೇ ||
ನೀನೆಲ್ಲವ ತಿಳಿ | ದಾನುವುದೇ ನೃಪ |
ಸೂನುವಿನೊಳು ಹಟ | ಕಾಣೆಸದಿರು ದಿಟ || ೧ ||

ಹಿಂದಕೀ ಶಕ್ತಿಯನೂ | ಬೇ |
ಕೆಂದೇ ಸೃಷ್ಟಿಸಿ ನಾನೂ ||
ಚಂದದೊಳಾಮುನಿ | ಗಂದಿತ್ತೆನು ಕಡೆ |
ಗಿಂದೀ ತರಳನು | ಹೊಂದಿಸಿಕೊಂಡಿಹ || ೨ ||

ಈ ಚಂದ್ರಾಯುಧವನ್ನೂ | ಕೊಂ |
ಡೀಚೆಗೆ ಬಂದವನನ್ನೂ ||
ನೀ ಚರಿತೆಯ ತಿಳಿ | ದೂ ಚಿಕ್ಕವನೊಳು |
ವಾಚಿಸಿ ಸೆಣಸಲು | ನಾಚಿಕೆ ಯೆನಗಿದು || ೩ ||

ಅದರಿಂದೀತನ ಹರಸೀ | ನೀ |
ಮುದದಿಂದೀಗಾದರಿಸೀ ||
ಒದಗಿದ ವಿಷಮತೆ | ಯದ ಪರಿಹರಿಸುತ |
ಸದಯನೆ ಸಲಹೈ | ವಿಧುಧರ ಶಂಕರ || ೪ || || 287 ||

**ಶಂಕರಾಭರಣ - ತ್ರಿವುಡೆ**

ಎಂದು ಬ್ರಹ್ಮನು ಬೇಡಿ ಪೊಗಳಲು |
ಚಂದ್ರಚೂಡನು ಹರುಷದೀ ||
ಬಂದು ನೀನೇ ಪೇಳ್ದ ಬಳಿಕಿ | ನ್ನೊಂದು ಮಾತೇ || ೧ ||

ಎನುತಿರಲಿಕಾ ರಾಜಹಂಸನು |
ಮಣಿಯಲಾ ವಿಧಿಹರರಿಗೇ ||
ಅನುನಯದಿ ಪಿಡಿದೆತ್ತಿ ಹರಸಿದ | ರ್ಘನತೆಯಿಂದ || ೨ ||

ಬಳಿಕಲಾ ವಿಧಿಹರರು ಸುರಪನ |
ಬಳಿಗೆ ಕರೆಯುತಲೆಲ್ಲವ ||
ತಿಳುಹಿ ನೃಪಸುತನೊಡನೆ ಸ್ನೇಹವ | ಬೆಳೆಯಿಸುತ್ತ || ೩ || || 290 ||

**ವಾರ್ಧಕ**
ಹರಬ್ರಹ್ಮರೆಲ್ಲರು ಹರಸಿ ಬೀಳ್ಕೊಡೆ ಬಳಿಕ |
ಹರುಷದಿಂ ಸುರಪಾಲಸುತೆ ಸೂರ್ಯಕಾಂತೆಯಂ |
ವರರಾಜಹಂಸಂಗೆ ಪರಿಣಯವಗೈದಿತ್ತು ಕಂಜಾಕ್ಷ ಬಾರಿಸಲ್ಕೆ ||
ಬರುವವ್ಪೋಲೂರ್ವಶಿಯನೊಡಬಡಿಸಿ ವೀಣೆಯಂ |
ಕರಕಿತ್ತು ಪುಷ್ಪಕವಿಮಾನದೊಳ್ ಕುಳ್ಳಿರಿಸಿ |
ತರಳೆಸಹಿತಾತನಂ ಕಳುಹಿಸಲು ಗಾಂಧಾರ ದೇಶವಂ ಸಾರ್ದನವನು || ೧ || || 291 ||

**ಸೌರಾಷ್ಟ್ರ - ತ್ರಿವುಡೆ**
ಪಾರ್ಥ ಕೇಳ್ಳೈ ಬಳಿಕಲಾ ನೃಪ |
ಪುತ್ರ ಸರ್ವವನರುಹೆ ಕೇಳುತ |
ಕಾರ್ತಿಕೇಯಾದಿಗಳು ಸಂತಸ | ವೆತ್ತರಾಗ || ೧ ||

ಬಳಿಕ ವೀಣೆಯನಿತ್ತು ವಿವರವ |
ತಿಳುಹಿ ಕಂಜಾಕ್ಷನನು ಮನ್ನಿಸಿ |
ಕೆಲವು ದಿನವಲ್ಲಿರ್ದು ಸರ್ವರ | ಬಳಿಯೊಳರುಹಿ || ೨ ||

ಸತಿಯರೀರ್ವರ ಕೂಡುತಾ ನೃಪ |
ಸುತನು ತನ್ನಯ ಪುರವ ಸೇರುತ |
ಪಿತನೊಳೆಲ್ಲವನರುಹೆ ಕೇಳ್ದಾ | ಪೃಥಿವಿಪತಿಯು || ೩ ||

ಪುತ್ರನಿಗೆ ಸುಮುಹೂರ್ತದಲಿ ತಾ |
ಧಾತ್ರಿಯಧಿಪತಿತನವ ಕಟ್ಟಲು |
ಮತ್ತಧಿಕ ವೈಭವದಿ ಧರೆಯಾ | ಳುತ್ತಲಿರ್ದ || ೪ ||

ರಾಜಹಂಸನ ಕೀರ್ತಿಯಧಿಕ ವಿ |
ರಾಜಿಸಿತು ಮೂಲೋಕದೊಳು ಸುಖ |
ತೇಜದಿಂದಿರುತಿರ್ದ ಕೇಳ್ಸುರ | ರಾಜಸುತನೆ || ೫ || || 296 ||

**ಭಾಮಿನಿ**
ರೂಢಿಸಿಪ್ಪೀ ಕಥೆಯ ಕೀರಿ |
ಕ್ಕಾಡು ಬೋಧಕ ವಿಷ್ಣುವೆನ್ನುವ |
ರೂಢಿಸುರ ಜಮದಗ್ನಿ ಗೋತ್ರಜ ಯಕ್ಷಗಾನದಲಿ ||
ಮಾಡಿದನು ಮುನಿಪುರದ ಹರಿ ದಯ |
ಗೂಡಿಸಿದ ತೆರ ಬಲ್ಲವರು ನೆರೆ |
ನೋಡಿ ತಪ್ಪಿರೆ ತಿದ್ದಿ ಮನ್ನಿಸಿ ಪೊರೆವ ಶ್ರೀಕೃಷ್ಣ || ೧ || || 297 ||

**ಮೋಹನ - ಏಕ**
ಮಂಗಳಂ ಜಯ | ಮಂಗಳಂ ಜಯ |
ಮಂಗಳಂ ಗೋವಿಂದಗೇ ||
ಮಂಗಳಂ ಜಯ ಮಂಗಳಂ ಜಯ |
ಮಂಗಳಂ ಸುರವಂದ್ಯಗೇ || ಪ ||
ಸುಂದರಾಂಗ ಮು | ಕುಂದ ತ್ರೈಜಗ |
ವಂದ್ಯ ನಿತ್ಯಾನಂದಗೇ ||
ನಂದಕಂದ ಖ | ಗೇಂದ್ರ ಗಮನ ಉ |
ಪೇಂದ್ರ ಸದ್ಗುಣ ವೃಂದಗೇ || ಮಂಗಲಂ || ೧ ||

ಘೋರ ದುರಿತವಿ | ದೂರ ತುಳಸೀ |
ಹಾರ ಜಗದೋದ್ಧಾರಗೇ ||
ಮಾರಪಿತ ನತ | ವಾರನುತ ಕೇ |
ಯೂರ ಕಂಕಣಧಾರಗೇ || ಮಂಗಲಂ || ೨ ||

ದೋಷ ಕುಲನಿ | ಶ್ಶೇಷ ಮನು ಮುನಿ |
ಪೋಷ ಸರ್ವವಿಶೇಷಗೇ ||
ಈಶಸಖ ಭಯ | ನಾಶ ರವಿ ಸಂ |
ಕಾಶ ಮುನಿಪುರವಾಸಗೇ || ಮಂಗಲಂ || ೩ || || 300 ||

*****ಶುಭಂ*****

# ಕೃತಜ್ಞತೆಗಳು

**ಅಂತರಜಾಲ ಪ್ರಕಾಶನ ಪ್ರಾಯೋಜಕರು:** ಕರ್ನಾಟಕ ಯಕ್ಷಗಾನ ಅಕಾಡೆಮಿ, ಕರ್ನಾಟಕ ಸರ್ಕಾರ

**ಮೂಲ ಪ್ರಕಾಶಕರು:** ಶ್ರೀಗೋಪಾಲಕೃಷ್ಣ ಪ್ರಕಾಶನ, ದೇಲಂಪಾಡಿ - ೧೯೬೩

**ಪ್ರಸಂಗ ಪ್ರತಿ ಆಧಾರ:** ಶ್ರೀಗೋಪಾಲಕೃಷ್ಣ ಪ್ರಕಾಶನ, ದೇಲಂಪಾಡಿ – ೧೯೬೩ರಲ್ಲಿ ಪ್ರಕಟಿತ ಪ್ರತಿ

**ಪ್ರಸಂಗ ಪ್ರತಿ ಕೊಟ್ಟವರು:** ಡಾ. ಪಟ್ಟಾಜೆ ಗಣೇಶ ಭಟ್

**ಪ್ರಸಂಗ ಪ್ರತಿ ಒದಗಣೆಗೆ ಸಹಕಾರ:** ಪಟ್ಟಾಜೆ ವಸಂತ ಕೃಷ್ಣ

**ಅಂತರಜಾಲ ಪ್ರತಿ ಬರವಣಿಗೆ:** ಗಣಪತಿ ಭಟ್ ನೆಲ್ಯಾಡಿ

**ಅಂತರಜಾಲ ಪ್ರತಿ ವಿನ್ಯಾಸ:** ವಿಂಧ್ಯಾಶ್ರೀ ಸೋಮಯಾಜಿ, ಅಜಿತ್ ಕಾರಂತ್

**ಅಂತರಜಾಲ ಪ್ರತಿ ತಿದ್ದುಪಡಿ:** ಶ್ರೀಧರ ಡಿ.ಎಸ್., ಗಿಂಡೀಮನೆ ಮೃತ್ಯುಂಜಯ, ದಿನೇಶ ಉಪ್ಪೂರ

**ಅಂತರಜಾಲ ಪ್ರತಿ ಉತ್ಪಾದನೆ ಮತ್ತು ಪ್ರಕಾಶನ:** ರವಿ ಮಡೋಡಿ, ನಟರಾಜ ಉಪಾಧ್ಯ, ಅಶ್ವಿನಿ ಹೊದಲ